ಸಂಪುಟ : 10 ಸಂಚಿಕೆ: 177 ಪುಟ : 4+2 ಬೆಲೆ: 3.00 ಬುಧವಾರ ಆಗಸ್ಟ್ 20 2025 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ...

VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 10 Issue : 177 Pages : 4+2 Price : 3.00 Wednesday August 20 2025 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಅತಿಥಿ ಶಿಕ್ಷಕರಿಗಿಲ್ಲ ವೇತನ ಭಾಗ್ಯ

■ವಿಜಯಸಾಕ್ಷಿ ಸುದ್ದಿ, ಮುಳಗುಂದ

ಮಕ್ಕಳ ಉಜ್ವಲ ಭವಿಷ್ಯ ನಿರ್ಮಾಣ ಮಾಡುವ ಶಿಕ್ಷಕರ ಕೊರತೆ ಎಲ್ಲೆಡೆ ಕಾಡುತ್ತಿದೆ. ಕೊರತೆ ನೀಗಿಸುವ ದೃಷ್ಟಿಯಿಂದ ಕಳೆದ ಐದು ವರ್ಷದಿಂದ ಸರಕಾರ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಿಗೆ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಂಡು ಬರುತ್ತಿದೆ. ಆದರೆ ಶಿಕ್ಷಕರಿಗೆ ವೇತನ ಮಾತ್ರ ಸಮಯಕ್ಕೆ ಸರಿಯಾಗಿ ಸಿಗುತ್ತಿಲ್ಲ ಎಂಬ ಆರೋಪಗಳು ಕೇಳಿಬರುತ್ತಿವೆ.

2024/25ನೇ ಸಾಲಿನ ಫೆಬ್ರುವರಿ ಹಾಗೂ ಮಾರ್ಚ್ ಎರಡು ತಿಂಗಳ ವೇತನ ಇನ್ನೂ ಪಾವತಿಯಾಗಿಲ್ಲ. 2025/26ನೇ ಸಾಲಿನ ಶಾಲೆಗಳು ಪ್ರಾರಂಭವಾಗಿ ಮೂರು ತಿಂಗಳು ಕಳೆದರೂ ವೇತನವಿಲ್ಲದೇ ಅತಿಥಿ ಶಿಕ್ಷಕರು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಕಳೆದ ವರ್ಷದ ವೇತನವಿಲ್ಲದೇ ಯಾವ ಆಧಾರದ ಮೇಲೆ ಕೆಲಸ ಮಾಡಬೇಕು, ಯಾರನ್ನು ಕೇಳಬೇಕು ಎಂಬ ಪ್ರಶ್ನೆ ಅತಿಥಿ ಶಿಕ್ಷಕರಲ್ಲಿ ಕಾಡುತ್ತಿದೆ.

ಕಳೆದ 5 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿರುವ ಅತಿಥಿ ಶಿಕ್ಷಕರಿಗೆ ಉದ್ಯೋಗ ಭದ್ರತೆಯಿಲ್ಲ. ಕಳೆದ ವರ್ಷದ ವೇತನವೂ ಇಲ್ಲ, ಈ ಸಾಲಿನ ವೇತನವೂ ಇಲ್ಲದೆ ನಿತ್ಯದ ಖರ್ಚು ನಿಭಾಯಿಸಲು ಆಗುತ್ತಿಲ್ಲ ಎಂದು ಅತಿಥಿ ಶಿಕ್ಷಕರು ಬೇಸರ ವ್ಯಕ್ತಪಡಿಸುತ್ತಿದ್ದಾರೆ.

ಗದಗ ಜಿಲ್ಲೆಯಾದ್ಯಂತ ಒಟ್ಟು 626 ಪ್ರಾಥಮಿಕ ಅತಿಥಿ ಶಿಕ್ಷಕರು, 232ಪ್ರೌಢಶಾಲಾ ಅತಿಥಿ ಶಿಕ್ಷಕರು ನೇಮಕಗೊಂಡಿದ್ದು, ಗದಗ ತಾಲೂಕಿನಾದ್ಯಂತ 83 ಅತಿಥಿ ಶಿಕ್ಷಕರು ನೇಮಕಗೊಂಡಿದ್ದಾರೆ.

ನಿಯಮಾನುಸಾರ ಆಯ್ಕೆಗೊಂಡ ಶಿಕ್ಷಕರಂತೆ ಅತಿಥಿ ಶಿಕ್ಷಕರೂ ಕಾರ್ಯ ನಿರ್ವಹಿಸುತ್ತಿದ್ದು, ಕನಿಷ್ಠ 20 ಸಾವಿರ ಮಾಸಿಕ ವೇತನ ನೀಡಬೇಕು ಮತ್ತು ಪ್ರತಿ ತಿಂಗಳು ಎಲ್ಲಾ ಶಿಕ್ಷಕರಿಗೆ ವೇತನವಾಗುವಂತೆ ನಮಗೂ ವೇತನವಾದಲ್ಲಿ ಆರ್ಥಿಕ ಸಂಕಷ್ಟದಿಂದ ಮುಕ್ತಿ ಹೊಂದಲು ಸಾಧ್ಯವಾಗುತ್ತದೆ ಎಂದು ಅತಿಥಿ ಶಿಕ್ಷಕರು ಆಗ್ರಹಿಸಿದ್ದಾರೆ.

## ಖಾಸಗಿ ಬಸ್ ಪಲ್ಟಿ; ಇಬ್ಬರು ಸಾವು

■ವಿಜಯಸಾಕ್ಷಿ ಸುದ್ದಿ, ಹಾವೇರಿ

ಬ್ಯಾಡಗಿ ತಾಲೂಕಿನ ಮೋಟೆಬೆನ್ನೂರಿನಲ್ಲಿ ಸಾಗುವ ರಾಷ್ಟ್ರೀಯ ಹೆದ್ದಾರಿ 48 ರಲ್ಲಿ ಭೀಕರ ಬಸ್ ಅಪಘಾತ ಸಂಭವಿಸಿದೆ.

ಚಾಲಕನ ನಿಯಂತ್ರಣ ತಪ್ಪಿ ಖಾಸಗಿ ಬಸ್ ಪಲ್ಟಿಯಾಗಿ ಸ್ಥಳದಲ್ಲೇ ಇಬ್ಬರು ಸಾವನ್ನಪ್ಪಿ 6 ಜನ ಗಂಭೀರವಾಗಿ ಗಾಯಗೊಂಡಿದ್ದಾರೆ. ಮೃತರನ್ನು ಅರ್ನವಿ(11), ಯಶ್(20) ಎಂದು ಗುರುತಿಸಲಾಗಿದೆ. 29 ಜನ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಗಾಯಾಳುಗಳನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ.

ಮಹಾರಾಷ್ಟ್ರದ ಸಾಂಗ್ಲಿಯಿಂದ ತಮಿಳುನಾಡು ಕಡೆ ಸಂಚರಿಸುತ್ತಿತ್ತು. ಮೋಟೆಬೆನ್ನೂರು ಗ್ರಾಮದ ಬಳಿ ಬಸ್ ಮುಂದೆ ಕಾರು ಬಂದಿದೆ. ಕಾರಿಗೆ ಗುದ್ದುವುದನ್ನು ತಪ್ಪಿಸಲು ಹೋಗಿ ಬಸ್ ಚಾಲಕ ಬ್ರೇಕ್ ಹಾಕಿದ್ದಾನೆ. ಪರಿಣಾಮ ಡಿವೈಡರಿಗೆ ಡಿಕ್ಕಿ ಹೊಡೆದು ಪಲ್ಟಿಯಾಗಿ ಬಸ್ ಬಿದ್ದಿದೆ. ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಬ್ಯಾಡಗಿ ಪೊಲೀಸರು ಹಾಗೂ ಎಸ್‌ಪಿ ಯಶೋದಾ ವಂಟಗೋಡಿ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಪೊಲೀಸರು, ಅಗ್ನಿಶಾಮಕ ದಳದ ಸಿಬ್ಬಂದಿ ಗಾಯಾಳುಗಳ ರಕ್ಷಣಾ ಕಾರ್ಯ ಮಾಡಿದ್ದು ಜಿಲ್ಲಾಸ್ಪತ್ರೆಗೆ ರವಾನೆ ಮಾಡಿದರು. ಹಲವು ಪುಟ್ಟ ಮಕ್ಕಳು ಗಂಭೀರವಾಗಿ ಗಾಯಗೊಂಡಿದ್ದಾರೆ. ಬ್ಯಾಡಗಿ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

### ಪಿಓಪಿ ಗಣೇಶ ಮೂರ್ತಿ ನಿಷೇಧ | ಮೂರ್ತಿ ವಿಸರ್ಜನೆಗೆ ವಿಶೇಷ ವ್ಯವಸ್ಥೆ; ಡಿಸಿ ಸಿ.ಎನ್. ಶ್ರೀಧರ

# ಗಣೇಶ ಚತುರ್ಥಿ ಪರಿಸರ ಸ್ನೇಹಿಯಾಗಿರಲಿ

■ವಿಜಯಸಾಕ್ಷಿ ಸುದ್ದಿ, ಗದಗ

ಪಿ.ಓ.ಪಿ (ಪ್ಲಾಸ್ಟರ್ ಆಫ್ ಪ್ಯಾರಿಸ್)ಯಿಂದ ತಯಾರಾಗುವ ಮೂರ್ತಿಗಳ ಮಾರಾಟ ಮತ್ತು ಬಳಕೆಗೆ ಈ ಬಾರಿ ಕಟ್ಟುನಿಟ್ಟಾಗಿ ನಿರ್ಬಂಧ ಹೇರಲಾಗಿದೆ. ಪಿಓಪಿ ಮೂರ್ತಿಗಳು ನದಿಗಳಲ್ಲಿ ವಿಸರ್ಜನೆಗೊಂಡಾಗ ಜಲಮಾಲಿನ್ಯ ಉಂಟುಮಾಡುವ ಸಾಧ್ಯತೆ ಇರುವುದರಿಂದ ಇದನ್ನು ಸಂಪೂರ್ಣವಾಗಿ ತಡೆಗಟ್ಟಲು ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ಸೂಚಿಸಿದರು.

ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಮಂಗಳವಾರ ಪರಿಸರ ಸ್ನೇಹಿ ಗಣೇಶ ಚತುರ್ಥಿ ಆಚರಣೆ ಕುರಿತು ಜರುಗಿದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ವಿವಿಧ ಇಲಾಖೆಗಳ ಅಧಿಕಾರಿಗಳು, ಪೊಲೀಸ್ ಇಲಾಖೆ, ನಗರ ಪಾಲಿಕೆ, ಸ್ಥಳೀಯ ಸಂಸ್ಥೆಗಳು ಸರಿಯಾಗಿ ಸರ್ಕಾರದ ಮಾರ್ಗಸೂಚಿಗಳ ಪಾಲನೆಗೆ ಸೂಚನೆ ನೀಡಿದರು.

ಗಣೇಶ ಮೂರ್ತಿಗಳು ನದಿ ತಟಗಳಲ್ಲಿ ವಿಸರ್ಜನೆಗೊಂಡಾಗ ಜಲಚರಗಳಿಗೆ ಅಪಾಯ ಮತ್ತು ನೀರಿನ ಮಾಲಿನ್ಯ

> ಪರಿಸರ ಉಳಿಸುವುದು ನಮ್ಮೆಲ್ಲರ ಹೊಣೆಗಾರಿಕೆ. ದೇವರ ಆರಾಧನೆ ಜೊತೆಗೆ ಪ್ರಕೃತಿಯ ಹಿತ ಕಾಪಾಡುವುದು ಇಂದಿನ ಕಾಲದ ಅವಶ್ಯಕತೆ. ಎಲ್ಲರ ಸಹಕಾರದಿಂದ ಪರಿಸರ ಸ್ನೇಹಿ ಹಬ್ಬಕ್ಕೆ ನಾವು ಉದಾಹರಣೆಯಾಗಿ ನಿಲ್ಲೋಣ.
>
> – ಸಿ.ಎನ್. ಶ್ರೀಧರ.
> ಜಿಲ್ಲಾಧಿಕಾರಿಗಳು, ಗದಗ



ಉಂಟಾಗುತ್ತದೆ. ಈ ಬಾರಿ ಗದಗ ಜಿಲ್ಲೆಯಲ್ಲಿ ಪಿಓಪಿ ಮೂರ್ತಿಗಳ ಮಾರಾಟ, ತಯಾರಿ ಹಾಗೂ ಉಪಯೋಗವನ್ನು ಸಂಪೂರ್ಣ ನಿಷೇಧಿಸಲಾಗಿದೆ. ಈ ನಿಟ್ಟಿನಲ್ಲಿ ವ್ಯಾಪಾರಸ್ಥರಿಗೆ ಸ್ಥಳೀಯ ಸಂಸ್ಥೆಗಳಿಂದ ನೋಟಿಸ್ ನೀಡಲಾಗಿದ್ದು, ನಿಯಮ ಉಲ್ಲಂಘನೆ ಮಾಡಿದರೆ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಎಚ್ಚರಿಸಿದ್ದಾರೆ.

ಪರಿಸರ ಸ್ನೇಹಿ ಮೂರ್ತಿಗಳಿಗೆ ಪ್ರೋತ್ಸಾಹವಿರಲಿ. ಕಲಾವಿದರಿಗೆ ಮಣ್ಣು ಮತ್ತಿತರ ಪರಿಸರ ಸ್ನೇಹಿ ವಸ್ತುಗಳಿಂದ ಮೂರ್ತಿಗಳ ತಯಾರಿಕೆಗೆ ಸಹಕಾರ ನೀಡಬೇಕು. ಪಟಾಕಿಗಳ ನಿಯಂತ್ರಿತ ಬಳಕೆ, ವಿಶೇಷವಾಗಿ ಹಸಿರು ಪಟಾಕಿಗಳ ಉಪಯೋಗವನ್ನು ಪ್ರೋತ್ಸಾಹಿಸಬೇಕಿದೆ. ಶಬ್ದ ಮತ್ತು ವಾಯು ಮಾಲಿನ್ಯ ತಡೆಯಲು ಈ ಕ್ರಮ ಅವಶ್ಯಕವೆಂದು ಜಿಲ್ಲಾಧಿಕಾರಿಗಳು ಒತ್ತಿ ಹೇಳಿದರು.

ಜಿಲ್ಲೆಯ ಪ್ರತಿ ಪಟ್ಟಣ ಹಾಗೂ ಗ್ರಾಮಗಳಲ್ಲಿ ತಾತ್ಕಾಲಿಕ ವಿಸರ್ಜನಾ ಗುಂಡಿಗಳನ್ನು ನಿರ್ಮಿಸಲು ಹಾಗೂ ಹಳ್ಳ–ಕಾಲುವೆಗಳಲ್ಲಿ ವಿಸರ್ಜನೆ ಮಾಡದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು. ಮೂರ್ತಿಗಳನ್ನು ನಿಗದಿಪಡಿಸಿದ ಸ್ಥಳಗಳಲ್ಲಿ ವಿಸರ್ಜಿಸಲು ಸಾರ್ವಜನಿಕರಿಗೆ ಪ್ರೋತ್ಸಾಹ ನೀಡಲು ಮನವಿ ಮಾಡಿದರು.

ಪರಿಸರ ರಕ್ಷಣೆ ನಮ್ಮ ಹೊಣೆಗಾರಿಕೆ. ಈ ಬಾರಿಯ ಗಣೇಶೋತ್ಸವ ಪರಿಸರ ಸ್ನೇಹಿಯಾಗಿ ಆಚರಿಸಿದರೆ, ಅದು ಮುಂದಿನ ಪೀಳಿಗೆಗೆ ಉತ್ತಮ ಸಂದೇಶವಾಗಲಿದೆ. ಸಾರ್ವಜನಿಕ ಗಣೇಶೋತ್ಸವ ಆಯೋಜಕರು ಪರವಾನಿಗೆಗಾಗಿ ಪದೇ ಪದೇ ಅಲೆಯುವುದನ್ನು ತಪ್ಪಸಲು ಏಕಗವಾಕ್ಷಿ ಅನುಮತಿ

> ಪೊಲೀಸ್ ಅಧಿಕಾರಿಗಳು ಸಭೆಯಲ್ಲಿ ಸ್ಪಷ್ಟಪಡಿಸಿದಂತೆ, ಧ್ವನಿವರ್ಧಕಗಳ ಬಳಕೆಗೆ ನಿಗದಿತ ಸಮಯದ ಮಿತಿಯನ್ನು ಅನುಸರಿಸಬೇಕಾಗುತ್ತದೆ. ರಾತ್ರಿ 10 ಗಂಟೆಯ ನಂತರ ಯಾವುದೇ ರೀತಿಯ ಸೌಂಡ್ ಸಿಸ್ಟಂ ಅಥವಾ ಲೌಡ್ ಸ್ಪೀಕರ್ ಬಳಸಕೂಡದು. ಸಾರ್ವಜನಿಕ ಸ್ಥಳಗಳಲ್ಲಿ ಧ್ವನಿಯ ನಿಯಂತ್ರಣ ಮಟ್ಟ ಮೀರಿ ಶಬ್ದ ಮಾಡುವ ಧ್ವನಿವರ್ಧಕ ನಿಷೇಧಿಸಲಾಗುವುದು ಎಂದು ಜಿಲ್ಲಾಧಿಕಾರಿಗಳು ಸ್ಪಷ್ಟಪಡಿಸಿದರು.

ನೀಡುವ ವ್ಯವಸ್ಥೆ ಜಾರಿಗೊಳಿಸಲಾಗುವದು. ಪೊಲೀಸರು, ನಗರಸಭೆ, ವಿದ್ಯುತ್ ಇಲಾಖೆ ಮತ್ತು ಆರೋಗ್ಯ ಇಲಾಖೆ ಈ ಕೇಂದ್ರದೊಂದಿಗೆ ಒಗ್ಗೂಡಲ್ಪಟ್ಟಿದ್ದು, ಎಲ್ಲಾ ಅನುಮತಿಗಳನ್ನೂ ಒಂದೇ ಅರ್ಜಿಯ ಮೂಲಕ ನೀಡಲಾಗುತ್ತದೆ. ಈ ಕುರಿತು ತುರ್ತಾಗಿ ಅಧಿಕಾರಿಗಳು ಏಕ ಗವಾಕ್ಷಿ ಕೇಂದ್ರ ತೆರೆದು ಮಾಹಿತಿ ನೀಡಬೇಕು ಎಂದು ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು. ಸಭೆಯಲ್ಲಿ ಜಿ.ಪಂ ಉಪಕಾರ್ಯದರ್ಶಿ ಸಿ.ಆರ್. ಮುಂಡರಗಿ, ಡಿವೈಎಸ್‌ಪಿ ಸಜ್ಜನರ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬಸನಗೌಡ ಕೋಟೂರ, ವಾರ್ತಾಧಿಕಾರಿ ವಸಂತ ಮಡ್ಲೂರ, ನಗರಸಭೆ ಪೌರಾಯುಕ್ತ ರಾಜಾರಾಮ ಪವಾರ್, ಜಿಲ್ಲಾ ಪರಿಸರ ಅಧಿಕಾರಿಗಳು, ವಿವಿಧ ಇಲಾಖೆಗಳ ಅಧಿಕಾರಿಗಳು, ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳು ಮತ್ತು ಗಣೇಶ ಮೂರ್ತಿ ತಯಾರಕರು, ವಿತರಕರು ಪಾಲ್ಗೊಂಡಿದ್ದರು.

### ಪಂಚ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನೆ ನಡೆಸಿದ ಜಿಲ್ಲಾಧ್ಯಕ್ಷ ಬಿ.ಬಿ. ಅಸೂಟಿ

# ಗ್ಯಾರಂಟಿ ಯೋಜನೆಗಳಲ್ಲಿ ಉತ್ತಮ ಪ್ರಗತಿ

■ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ಸರ್ಕಾರ ಜಾರಿಗೆ ತಂದಿರುವ ಪಂಚ ಗ್ಯಾರಂಟಿ ಯೋಜನೆಗಳು ಜನರಲ್ಲಿ ಉತ್ತಮ ಪ್ರತಿಕ್ರಿಯೆ ಪಡೆದಿದ್ದು, ಗದಗ ಜಿಲ್ಲೆಯಾದ್ಯಂತ ಮಹತ್ತರ ಪ್ರಮಾಣದಲ್ಲಿ ಅನುಷ್ಠಾನಗೊಂಡಿರುವುದು ಅಂಕಿಅಂಶಗಳಿಂದ ಸ್ಪಷ್ಟವಾಗಿದೆ ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಬಿ.ಬಿ. ಅಸೂಟಿ ಹೇಳಿದರು.

ನಗರದ ಜಿಲ್ಲಾಡಳಿತ ಭವನದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ಪಂಚ ಗ್ಯಾರಂಟಿ ಯೋಜನೆಗಳ ಜಿಲ್ಲಾ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಅನ್ನಭಾಗ್ಯ ಯೋಜನೆ ಮೂಲಕ 2.34 ಲಕ್ಷ ಜನರಿಗೆ ಅಕ್ಕಿ ವಿತರಣೆ ಆಗಿದ್ದು, ಇದರ ಅನುಷ್ಠಾನ

> ಜಿಲ್ಲಾ ಸಮಿತಿಯ ಸದಸ್ಯರಾದ ಡಂಬಳದ ವಿರೂಪಾಕ್ಷಪ್ಪ ಯರಾಶಿ ಅವರು ಇತ್ತೀಚೆಗೆ ಅಕಾಲಿಕವಾಗಿ ಮರಣ ಹೊಂದಿದ ಕಾರಣ ಸಭೆಯಲ್ಲಿ ಸಭೆಯ ಆರಂಭಕ್ಕೂ ಮುನ್ನ ಸದರಿಯವರಿಗೆ ಮೌನಚರಣೆ ಸಲ್ಲಿಸುವ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು.



ಪ್ರಮಾಣ ಶೇ.93.27 ಆಗಿದೆ. ಗೃಹಜ್ಯೋತಿ ಯೋಜನೆಯಡಿಯಲ್ಲಿ 2.77 ಲಕ್ಷ ಮನೆಗಳಿಗೆ ಉಚಿತ ವಿದ್ಯುತ್ ಪ್ರಯೋಜನ ತಲುಪಿದ್ದು, ಪ್ರಗತಿ ಪ್ರಮಾಣ ಶೇ. 98.68 ಆಗಿದೆ. ಯುವನಿಧಿ ಯೋಜನೆ ಮೂಲಕ 0.059 ಲಕ್ಷ ಯುವಕರಿಗೆ ಹಣಕಾಸು ನೆರವು ತಲುಪಿದ್ದು, ಶೇ 100 ಫಲಾನುಭವಿಗಳು ಪ್ರಯೋಜನ ಪಡೆದುಕೊಂಡಿದ್ದಾರೆ ಎಂದು ಹೇಳಿದರು.

ಶಕ್ತಿ ಯೋಜನೆ ಅಡಿಯಲ್ಲಿ 1127.47 ಲಕ್ಷ ಪ್ರಯಾಣಗಳು ದಾಖಲಾಗಿವೆ. ಈ ಯೋಜನೆಯೂ ಶೇ. 100ರಷ್ಟು ಯಶಸ್ವಿಯಾಗಿ ಅನುಷ್ಠಾನಗೊಂಡಿದೆ. ಒಟ್ಟಾರೆ, ಪಂಚ ಗ್ಯಾರಂಟಿ ಯೋಜನೆಗಳಡಿ ಗದಗ ಜಿಲ್ಲೆಯಲ್ಲಿ 1135.202 ಲಕ್ಷ ಫಲಾನುಭವಿಗಳು ಪ್ರಯೋಜನ ಪಡೆದಿದ್ದು, ಸರ್ಕಾರ ಇದಕ್ಕಾಗಿ 1758.83 ಕೋಟಿ ರೂ ವೆಚ್ಚ ಮಾಡಿದೆ ಎಂದು ವಿವರಿಸಿದರು.

ರಾಜ್ಯ ಅಧ್ಯಕ್ಷರಾದ ಎಚ್.ಎಮ್. ರೇವಣ್ಣ ಅವರ ಸೂಚನೆ ಮೇರೆಗೆ ತಾಲೂಕಿನಲ್ಲಿ 3–4 ಗ್ರಾಮ ಪಂಚಾಯಿತಿ ಫಲಾನುಭವಿಗಳ ಸಮಸ್ಯೆ ಕುರಿತು ಜನಸ್ಪಂದನ ಸಭೆ ಜರುಗಿಸಲು ಸೂಚಿಸಿದ್ದಾರೆ ಅದನ್ನು ಸರಿಯಾಗಿ ನಿರ್ವಹಿಸೋಣ. ಹಿಂದಿನ ಸಭೆಗಳ ನಡಾವಳಿಗಳು ಹಾಗೂ ಅನುಸರಣ ವರದಿಗಳನ್ನು ಸಭೆಯಲ್ಲಿ ಮಂಡಿಸಿ ಚರ್ಚಿಸಿ ಕೈಗೊಂಡ ಕ್ರಮದ ಕುರಿತು ಸಂಬಂಧಿತ ಇಲಾಖೆ ಅಧಿಕಾರಿಗಳು ಮುಂದಾಗಬೇಕೆಂದು ತಿಳಿಸಿದರು. ಸಭೆಯಲ್ಲಿ ಜಿಲ್ಲಾ ಪಂಚಾಯಿತಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರು, ತಾಲೂಕ ಅಧ್ಯಕ್ಷರು, ಜಿಲ್ಲಾ ಸಮಿತಿ ಸದಸ್ಯರು ಪಾಲ್ಗೊಂಡು ಗ್ಯಾರಂಟಿ ಅನುಷ್ಠಾನಕ್ಕೆ ಹಾಗೂ ಅರ್ಹರಿಗೆ ಯೋಜನೆ ತಲುಪಿಸುವಲ್ಲಿ ಇರುವ ಸಮಸ್ಯೆ ಹಾಗೂ ಪರಿಹಾರಗಳ ಕುರಿತು ಚರ್ಚಿಸಿದರು. ಸಭೆಯಲ್ಲಿ ಜಿಲ್ಲಾ ಸಮಿತಿಯ ಉಪಾಧ್ಯಕ್ಷರುಗಳಾದ ಹೇಮಂತಗೌಡ ಪಾಟೀಲ, ಪಿ.ಬಿ. ಅಳಗವಾಡಿ, ಸಮಿತಿ ಸದಸ್ಯರು ಹಾಗೂ ಜಿ.ಪಂ ಉಪ ಕಾರ್ಯದರ್ಶಿ ಸಿ.ಆರ್. ಮುಂಡರಗಿ, ಜಿ.ಪಂ. ಯೋಜನಾ ನಿರ್ದೇಶಕ ಎಂ.ವಿ. ಚಳಗೇರಿ ಸೇರಿದಂತೆ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಇಲಾಖೆ ಅಧಿಕಾರಿಗಳು

> 2025ರ ಜುಲೈ ಅಂತ್ಯದವರೆಗಿನ ಒಟ್ಟಾರೆ ಪ್ರಗತಿ ಉತ್ತಮವಾಗಿದೆ. ಇದಕ್ಕೆಲ್ಲ ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಎಚ್.ಕೆ. ಪಾಟೀಲರ ಮಾರ್ಗದರ್ಶನ ಕಾರಣವಾಗಿದೆ. ಯೋಜನೆ ಆರಂಭದಿಂದ ಗೃಹಲಕ್ಷ್ಮೀ ಯೋಜನೆಯಲ್ಲಿ 2.56 ಲಕ್ಷ ಫಲಾನುಭವಿಗಳಿಗೆ ನೆರವು ತಲುಪಿದ್ದು, ಇದರ ಅನುಷ್ಠಾನ ಪ್ರಮಾಣ ಶೇ.97.99 ಆಗಿದೆ. ಈ ಯೋಜನೆಯಡಿ ಜಿಲ್ಲೆಗೆ 935 ಕೋಟಿ ರೂ ಸಹಾಯ ನೀಡಲಾಗಿದೆ ಎಂದು ಬಿ.ಬಿ. ಅಸೂಟಿ ತಿಳಿಸಿದರು.

## ಸಂಭ್ರಮದ ಶ್ರೀ ವೀರಭದ್ರೇಶ್ವರ ತೇರು



■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಸಮೀಪದ ಜಕ್ಕಲಿ ಗ್ರಾಮದಲ್ಲಿ ಶ್ರಾವಣದ ಕೊನೆಯ ಸೋಮವಾರದಂದು ವೀರಭದ್ರೇಶ್ವರ ದೇವರ ಉಚ್ಚಾಯ ತೇರು ನೂರಾರು ಭಕ್ತರ ಸಮ್ಮುಖದಲ್ಲಿ ಸಡಗರ ಸಂಭ್ರಮದೊಂದಿಗೆ ಜರುಗಿತು. ಜಾತ್ರೆಯ ಅಂಗವಾಗಿ ಬೆಳಗಿನ ಜಾವದಿಂದಲೇ ದೇವಸ್ಥಾನದಲ್ಲಿ ವಿಶೇಷ ಪೂಜಾ ಕೈಂಕರ್ಯಗಳು, ಮಹಾ ರುದ್ರಾಭಿಷೇಕ ಸೇರಿದಂತೆ ಅನೇಕ ಧಾರ್ಮಿಕ ಕಾರ್ಯಕ್ರಮಗಳು ನಡೆದವು. ಮಧ್ಯಾಹ್ನ ಅನ್ನದಾಸೋಹ ನಡೆಯಿತು.

ಸಂಜೆ 5.30ಕ್ಕೆ ಶ್ರೀ ಕಲ್ಮೇಶ್ವರ ದೇವಸ್ಥಾನದಿಂದ ನಂದಿಕೋಲ ತರಲಾಯಿತು. ನಂತರ ಗ್ರಾಮದ ಶಿವಶರಣರಾದ ಅಣ್ಣಯ್ಯ–ತಮ್ಮಯ್ಯನವರ ಮನೆಯಿಂದ ಕಳಸವನ್ನು ತಂದು ಪೂಜಿಸಿ ತೇರಿಗೆ ಜೋಡಿಸಲಾಯಿತು. ಸಂಜೆ 6 ಗಂಟೆಗೆ ಪೂಜೆ ಸಲ್ಲಿಸಿದ ಬಳಿಕ ತೇ–ೀರು ಎಳೆಯಲು ಚಾಲನೆ ನೀಡಲಾಯಿತು. ಗ್ರಾಮದ ಪ್ರಮುಖ ಬೀದಿಗಳಾದ ಗಾಂಧಿ ಸರ್ಕಲ್, ಶ್ರೀಹನುಮಂತ ದೇವರ ಗುಡಿ, ಸಂಗಮೇಶ್ವರ ಗುಡಿ ಮೂಲಕ ಕಲ್ಮೇಶ್ವರ ದೇವಸ್ಥಾನವರೆಗೆ ಸಂಚರಿಸಿತು.

ಈ ವೇಳೆ ಕೆಲವು ಭಕ್ತರು ದೇಹದ ವಿವಿಧ ಕಡೆಗಳಲ್ಲಿ ಶಸ್ತ್ರ ಚುಚ್ಚಿಕೊಂಡರು. ಜಾತ್ರಾ ಮಹೋತ್ಸವದ ಪ್ರಯುಕ್ತ ದೇವಸ್ಥಾನಕ್ಕೆ ತಳಿರು–ತೋರಣಗಳನ್ನು ಕಟ್ಟಿ ಅಲಂಕರಿಸಲಾಗಿತ್ತು.

### ಗ್ರಾಮಸ್ಥರ ಸೇವೆಯಲ್ಲಿ ನಿರತ ಹಳ್ಳಿಗುಡಿಯ ಫ್ರಾನ್ಸ್ ಇಂಡಿಯಾ ಕರ್ನಾಟಕ ಸಾರ್ವಜನಿಕ ಆಸ್ಪತ್ರೆ

# ಗ್ರಾಮಸ್ಥರಿಗೆ ವರದಾನವಾದ ಎಫ್‌ಐಕೆ ಆಸ್ಪತ್ರೆ

■ವಿಜಯಸಾಕ್ಷಿ ಸುದ್ದಿ, ಗದಗ

ಹಳ್ಳಿಗುಡಿ ಗ್ರಾಮದ ಆಸ್ಪತ್ರೆಯೊಂದು ಕಳೆದ 35 ವರ್ಷಗಳಿಂದ ಗದಗ ಗ್ರಾಮಸ್ಥರಿಗೆ ಉಚಿತ ವೈದ್ಯಕೀಯ ಸೇವೆಯನ್ನು ನೀಡುತ್ತಿದೆ. ಫ್ರಾನ್ಸ್ ಇಂಡಿಯಾ ಕರ್ನಾಟಕ (FIK) ಆಸ್ಪತ್ರೆ ಎಂದು ಕರೆಯಲ್ಪಡುವ ಹಳ್ಳಿಗುಡಿ ಆರೋಗ್ಯ ರಕ್ಷಣಾ ಕೇಂದ್ರವನ್ನು 1995ರಲ್ಲಿ ಅನಿವಾಸಿ ಭಾರತೀಯ ಮಹೇಶ ಘಟರೆಡ್ಡಿಹಾಳ ಪ್ರಾರಂಭಿಸಿದರು.

ಈಗ ಮಹೇಶ್ ಅವರ ಮಗಳು ಸುಶೀಲಾ ಘಟರೆಡ್ಡಿಹಾಳ ಆಸ್ಪತ್ರೆಯನ್ನು ನೋಡಿಕೊಳ್ಳುತ್ತಿದ್ದಾರೆ. ಆ ದಿನಗಳಲ್ಲಿ, ಈ ಗ್ರಾಮೀಣ ಭಾಗಗಳಲ್ಲಿ ಯಾವುದೇ ಆರೋಗ್ಯ ಕೇಂದ್ರಗಳು ಇರಲಿಲ್ಲ ಮತ್ತು ಈಖಎ ಆಸ್ಪತ್ರೆಯು ಅನೇಕ ಗ್ರಾಮಸ್ಥರಿಗೆ ವರದಾನವಾಗಿತ್ತು. ಈಖಎ ಆಸ್ಪತ್ರೆಯು ಈ ಗ್ರಾಮೀಣ ಪ್ರದೇಶದಲ್ಲಿ ಉಚಿತ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುವ



ಮೂಲಕ ಸಾವಿರಾರು ಗ್ರಾಮಸ್ಥರಿಗೆ ಚಿಕಿತ್ಸೆ ನೀಡಿದೆ. ಮಹೇಶ ಅವರ ಸ್ಮರಣಾರ್ಥ ಚಿಕ್ಕಮಕ್ಕಳ ಉಚಿತ ಆರೋಗ್ಯ ಶಿಬಿರವನ್ನು ಪ್ರತಿವರ್ಷ ಆಯೋಜಿಸುತ್ತ ಬಂದಿದ್ದು, ಇದೇ ಆಗಸ್ಟ್ 2ರಂದು ಮಹೇಶ ಅವರ 18ನೇ ವರ್ಷದ ಸ್ಮರಣಾರ್ಥ ಆರೋಗ್ಯ ಶಿಬಿರವನ್ನು ಆಯೋಜಿಸುತ್ತಿದೆ.

ಮಹೇಶ ತಿಮ್ಮಾಪುರ ಗ್ರಾಮದಲ್ಲಿ ಜನಿಸಿದರು ಮತ್ತು ವೈದ್ಯಕೀಯ ಅಧ್ಯಯನಕ್ಕಾಗಿ ಯುರೋಪ್‌ಗೆ ಹೋದರು. ಅವರು ಪ್ಯಾರಿಸ್‌ನಲ್ಲಿ ನೆಲೆಸಿದರು ಮತ್ತು 1960ರ ದಶಕದಲ್ಲಿ ಯೋಗವನ್ನು ಪ್ರಚಾರ ಮಾಡಿದರು. ಮಹೇಶ್ ತಮ್ಮ ಹುಟ್ಟೂರಲ್ಲಿ ಆಸ್ಪತ್ರೆಯನ್ನು ಪ್ರಾರಂಭಿಸಲು ನಿರ್ಧರಿಸಿದರು. ಅವರು ಗದಗ ಮತ್ತು ಕೊಪ್ಪಳ ರಸ್ತೆಯಲ್ಲಿರುವ ಹಳ್ಳಿಗುಡಿ ಗ್ರಾಮವನ್ನು ಆಯ್ದು–ಕೊಂಡರು. ಈ ಆಸ್ಪತ್ರೆಯು ಸುತ್ತಮುತ್ತಲಿನ ಹಳ್ಳಿಗಳಿಗೆ ಉಚಿತ ಔಷಧಿಗಳು ಮತ್ತು ಚಿಕಿತ್ಸೆಯನ್ನು ನೀಡುತ್ತಿದೆ. 2007 ರಲ್ಲಿ ಮಹೇಶ್ ಅವರ ಮರಣದ ನಂತರ, ಅವರ ಮಗಳು ಸುಶೀಲಾ ಘಟರೆಡ್ಡಿಹಾಳ ಆಸ್ಪತ್ರೆಯನ್ನು ನೋಡಿಕೊಳ್ಳುತ್ತಿದ್ದಾರೆ.

ಈ ಆಸ್ಪತ್ರೆಯು ಗ್ರಾಮೀಣ ಪ್ರದೇಶದಲ್ಲಿ ಉಚಿತ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುವ ಮೂಲಕ ಅನೇಕ ಗ್ರಾಮಸ್ಥರಿಗೆ ವರವಾಗಿ ಪರಿಣಮಿಸಿದೆ. ಗದಗ ಪಟ್ಟಣದ ಚಿಕ್ಕ ಮಕ್ಕಳ ಹಾಗೂ ನವಜಾತ ಶಿಶು ತಜ್ಞರಾದ ವೆಂಕಟೇಶ ರಾಥೋಡ ಮತ್ತಿತರರು ಚಿಕಿತ್ಸೆ ಮತ್ತು ಔಷಧಿಗಳನ್ನು ನೀಡಲು ಗದಗದಿಂದ ಹಳ್ಳಿಗುಡಿಗೆ ಭೇಟಿ ನೀಡುತ್ತಿದ್ದಾರೆ.

ಹಳ್ಳಿಗುಡಿ ಬಳಿಯ ಲಕ್ಕುಂಡಿಯ ಗ್ರಾಮಸ್ಥರಾದ ಷಣ್ಮುಖ ಹೊಂಬಳ ಆಸ್ಪತ್ರೆಯ ಬಗ್ಗೆ ಮೆಚ್ಚುಗೆಯ ನುಡಿಗಳನ್ನಾಡಿ, ಎಫ್‌ಐಕೆ ಆಸ್ಪತ್ರೆಯಿಂದ ನಮಗೆ ಅತ್ಯುತ್ತಮ ಔಷಧಿಗಳು ಮತ್ತು ಚಿಕಿತ್ಸೆ ಸಿಗುತ್ತದೆ. ಹಳ್ಳಿಕೇರಿ, ಹಳ್ಳಿಗುಡಿ, ತಿಮ್ಮಾಪುರ, ಲಕ್ಕುಂಡಿ ಮತ್ತು ಜಂತ್ಲಿಶಿರೂರ್‌ನ ಅನೇಕ ಗ್ರಾಮಸ್ಥರು ಆರೋಗ್ಯ ಸಮಸ್ಯೆಗಳಿಗಾಗಿ ಎಫ್‌ಐಕೆಗೆ ಭೇಟಿ ನೀಡುತ್ತಾರೆ ಮತ್ತು ಉತ್ತಮ ಚಿಕಿತ್ಸೆ ಪಡೆಯುತ್ತಾರೆ ಎಂದರು.

> ನನ್ನ ತಂದೆ ಮಹೇಶ್ ಘಟರೆಡ್ಡಿಹಾಳ ಅವರು ಈ ಪ್ರದೇಶದ ನಿರ್ಗತಿಕ ಮತ್ತು ಬಡ ಜನರ ಕಲ್ಯಾಣಕ್ಕಾಗಿ ಮಾನವೀಯ ಸೇವೆ ಮತ್ತು ತ್ಯಾಗದ ದೀರ್ಘ ಪರಂಪರೆಯನ್ನು ಬಿಟ್ಟುಹೋಗಿದ್ದಾರೆ. ಇಂದಿನವರೆಗೂ, ನಾವೆಲ್ಲರೂ ಬಡವರು ಮತ್ತು ನಿರ್ಗತಿಕರನ್ನು ಪ್ರೀತಿ ಮತ್ತು ವಾತ್ಸಲ್ಯದಿಂದ ನೋಡಿಕೊಳ್ಳುತ್ತೇವೆ ಮತ್ತು ಅನೇಕ ಗ್ರಾಮಸ್ಥರು ನಮ್ಮ ಸೇವೆಗೆ ಸಂತೋಷಪಡುತ್ತಾರೆ.
>
> – ಸುಶೀಲಾ ಘಟರೆಡ್ಡಿಹಾಳ

## ಸಾಕ್ಷಿ ಸುಭಾಷಿತ

'ನಮ್ಮ ಗುರಿಗಳ ಮೇಲೆ ನಾವು ನಂಬಿಕೆ ಇಟ್ಟಾಗ, ನಾವು – ಯಾವ ಕನಸು ಕಾಣುತ್ತೇವೆಯೋ ಅದು

– ಎ.ಪಿ.ಜೆ.ಅಬ್ದುಲ್ ಕಲಾಂ

## ಸಂಪಾದಕೀಯ

### ಮುಷ್ಕರದ ಹಕ್ಕನ್ನು ಕಿತ್ತುಕೊಳ್ಳುವ ವಿಧೇಯಕ

ಸಾರಿಗೆ ಸಂಸ್ಥೆಯ ನೌಕರರ ಮುಷ್ಕರದ ಹಕ್ಕನ್ನು ಪರಿಣಾಮಕಾರಿಯಾಗಿ ಹತ್ತಿಕ್ಕುವ ಉದ್ದೇಶದಿಂದ ಇತ್ತೀಚೆಗೆ ವಿಧಾನಸಭೆಯಲ್ಲಿ ಎಸ್ಮಾ (ಇಖಒಂ) ಕಾಯ್ದೆಗೆ ತಂದಿರುವ ತಿದ್ದುಪಡಿಗಳು ತೀವ್ರ ಆತಂಕಕ್ಕೆ ಕಾರಣವಾಗಿವೆ.

ಇದು ಕೇವಲ ಒಂದು ಕಾಯ್ದೆಯ ತಿದ್ದುಪಡಿಯಾಗಿರದೆ, ಸಾವಿರಾರು ನೌಕರರ ಪ್ರಜಾಪ್ರಭುತ್ವದ ಹಕ್ಕುಗಳನ್ನು ಮೊಟಕುಗೊಳಿಸುವ ಒಂದು ಪ್ರಯತ್ನವಾಗಿದೆ. 2018ರಲ್ಲಿ ಜಾರಿಗೆ ತಂದಿದ್ದ ಎಸ್ಮಾ ಕಾಯ್ದೆಯನ್ನು 10 ವರ್ಷಗಳ ಬದಲಿಗೆ 20 ವರ್ಷಗಳಿಗೆ ವಿಸ್ತರಿಸಲು ತಿದ್ದುಪಡಿ ತರಲಾಗಿದೆ. ಇದು ಸರ್ಕಾರವು ನೌಕರರ ಸಂಕಷ್ಟಗಳಿಗೆ ಕಿವಿಯಾಗುವುದಕ್ಕಿಂತ ಹೆಚ್ಚಾಗಿ, ಬಲವಂತವಾಗಿ ಅವರ ಪ್ರತಿಭಟನೆಯ ಧ್ವನಿಯನ್ನು ಅಡಗಿಸಲು ಮುಂದಾಗಿದೆ ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆ.

ಒಂದು ಕಡೆ ಮುಷ್ಕರಗಳನ್ನು ತಡೆಯಲು ಬಲವಂತದ ಕಾಯ್ದೆಗಳನ್ನು ತರುತ್ತಿರುವ ಸರ್ಕಾರ, ಮತ್ತೊಂದೆಡೆ ನೌಕರರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳುವಲ್ಲಿ ವಿಫಲವಾಗಿದೆ. ಶಾಸಕ ಸುರೇಶ್ ಕುಮಾರ್ ಅವರು ಹೇಳಿದಂತೆ, ನೌಕರರ ದೂರುಗಳನ್ನು ಆಲಿಸಲು ಮತ್ತು ಅವರೊಂದಿಗೆ ಮಾತುಕತೆ ನಡೆಸಲು ಒಂದು ಸೂಕ್ತ ವೇದಿಕೆ ಸೃಷ್ಟಿಸಬೇಕಾದ ಅಗತ್ಯವಿದೆ.

ಆದರೆ, ಸಾರಿಗೆ ಸಚಿವರು ಮಾತುಕತೆ ನಡೆಸಿದರೂ, ನಿಗಮಗಳಲ್ಲಿನ ಒಟ್ಟು 13 ಸಂಘಟನೆಗಳಲ್ಲಿ ಚುನಾವಣೆ ನಡೆಯದೆ ಇರುವುದು ಮತ್ತು ನೌಕರರಿಗೆ ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶವಿಲ್ಲದಿರುವುದು ಪರಿಸ್ಥಿತಿಯ ಗಂಭೀರತೆಯನ್ನು ಹೆಚ್ಚಿಸಿದೆ.

ಮುಷ್ಕರ ನಡೆಸುವ ಹಕ್ಕು ಪ್ರಜಾಪ್ರಭುತ್ವದ ಒಂದು ಅವಿಭಾಜ್ಯ ಅಂಗ. ಇದನ್ನು ಕಿತ್ತುಕೊಂಡಾಗ, ನೌಕರರು ತಮ್ಮ ನ್ಯಾಯಯುತ ಬೇಡಿಕೆಗಳನ್ನು ಮಂಡಿಸಲು ಇರುವ ಕೊನೆಯ ಮಾರ್ಗವನ್ನು ಕಳೆದುಕೊಳ್ಳುತ್ತಾರೆ.

ಈ ತಿದ್ದುಪಡಿಯು ಸರ್ಕಾರದ ನಿರಂಕುಶ ಧೋರಣೆಯನ್ನು ಪ್ರತಿಬಿಂಬಿಸುತ್ತದೆ. ಸರ್ಕಾರವು ಬಲವಂತದಿಂದ ಸಮಸ್ಯೆಗಳನ್ನು ಪರಿಹರಿಸುವ ಬದಲು, ಮಾತುಕತೆ ಮತ್ತು ಸೌಹಾರ್ದಯುತ ವಾತಾವರಣದ ಮೂಲಕ ನೌಕರರ ಬೇಡಿಕೆಗಳನ್ನು ಪರಿಶೀಲಿಸಬೇಕು. ಇಲ್ಲವಾದರೆ, ಅತೃಪ್ತಿ ಹೆಚ್ಚಾಗಿ ಸರ್ಕಾರ ಮತ್ತು ನೌಕರರ ನಡುವಿನ ಸಂಬಂಧ ಹದಗೆಡಬಹುದು. ವಿಧೇಯಕ ಅವಸರದಲ್ಲಿ ಅಂಗೀಕಾರವಾಗಿರುವುದು ಗಂಭೀರ ಚಿಂತನೆಯನ್ನು ಬಯಸುತ್ತದೆ.

**ಮಹಿಳಾ ಜ್ಞಾನ ವಿಕಾಸ ಕಾರ್ಯಕ್ರಮದಡಿಯಲ್ಲಿ ಪೌಷ್ಠಿಕ ಆಹಾರ ಮೇಳ ಕಾರ್ಯಕ್ರಮ**

# ತಾಯಂದಿರು ಮಕ್ಕಳನ್ನು ಪ್ರೀತಿಯಿಂದ ಕಾಣಬೇಕು

■ವಿಜಯಸಾಕ್ಷಿ ಸುದ್ದಿ, ಗದಗ

ಅಪೌಷ್ಠಿಕತೆಯನ್ನು ನಾವು ಹೋಗಲಾಡಿಸಬೇಕು. ಇಂದಿನ ದಿನಗಳಲ್ಲಿ ಆರೋಗ್ಯ ಎನ್ನುವುದು ಅತ್ಯಂತ ಪ್ರಮುಖವಾದದ್ದು. ಮೊಳಕೆ ಕಟ್ಟಿದ ಕಾಳುಗಳನ್ನು ಸೇವಿಸಿ. ತಾಯಂದಿರು ಮಕ್ಕಳನ್ನು ಪ್ರೀತಿಯಿಂದ ಕಾಣಬೇಕು ಎಂದು ಡಾ. ವೀರೇಶ ಸತ್ತಿಗೇರಿ ಹೇಳಿದರು.

ರೋಣ ತಾಲೂಕಿನ ಸಂದಿಗವಾಡ ಗ್ರಾಮದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಬಿ.ಸಿ ಟ್ರಸ್ಟ್ ಸಹಯೋಗದಲ್ಲಿ ಮಹಿಳಾ ಜ್ಞಾನ ವಿಕಾಸ ಕಾರ್ಯಕ್ರಮದಡಿಯಲ್ಲಿ ಪೌಷ್ಠಿಕ ಆಹಾರ ಮೇಳ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಊಟದ ಸಮಯದಲ್ಲಿ ತರಕಾರಿಗಳನ್ನು ತಿನ್ನಬೇಕು. ಇದರ ಕುರಿತು ತಾಯಂದಿರು ಹೆಚ್ಚಿನ ಜವಾಬ್ದಾರಿ ತೆಗೆದುಕೊಳ್ಳಬೇಕು. ನಾವು ತಿನ್ನುವ ಆಹಾರ ಎಷ್ಟು ಪೌಷ್ಠಿಕವಾಗಿದೆ ಅಥವಾ ನಮ್ಮ ಮಕ್ಕಳಿಗೆ ತಿನ್ನಲು ಕೊಡಿಸುತ್ತಿರುವ ತಿನಿಸು ಅವರ ಆರೋಗ್ಯಕ್ಕೆ ಪೂರಕವೇ ಎಂಬ ಬಗ್ಗೆ ಒಮ್ಮೆ ಕೂಡ ನಾವು ಯೋಚಿಸುವುದಿಲ್ಲ. ಹಾಗೆಯೇ ನಮ್ಮ ಆಹಾರ ಪದ್ಧತಿಯಿಂದ ನಮ್ಮ ಆರೋಗ್ಯದ ಮೇಲಾಗುವ ದುಷ್ಪರಿಣಾಮಗಳನ್ನು ನಾವು ಸಾರಾಸಗಟಾಗಿ ನಿರ್ಲಕ್ಷಿಸಿದ್ದೇವೆ ಎಂದರು.

ಅಪೌಷ್ಠಿಕತೆಗೆ ಪ್ರಮುಖ ಕಾರಣ ನಮ್ಮ ಆಹಾರ ಪದ್ಧತಿ. ಸಮಯದ ಅಭಾವದ ನೆಪ ಹೇಳಿ ಎಲ್ಲೆಂದರಲ್ಲಿ, ಕೈಗೆ ಸಿಕ್ಕಿದ್ದು, ಕಣ್ಣಿಗೆ ಕಂಡದ್ದನ್ನು ತಿನ್ನುವ ನಮ್ಮ ಈಗಿನ ಅಭ್ಯಾಸವೇ ಭವಿಷ್ಯದಲ್ಲಿ ನಮಗೆ ಮಾರಕ. ಪಾಶ್ಚಿಮಾತ್ಯ ಸಂಸ್ಕೃತಿಯ ಅನುಕರಣೆ, ಆಹಾರ ಬೆಳೆಗಳಿಗೆ ಹೆಚ್ಚು ರಾಸಾಯನಿಕ ಬಳಸುವುದು, ಪ್ರಸ್ತುತ ಹಣ್ಣು, ತರಕಾರಿ ಸಂಸ್ಕರಣೆಗೆ ಬಳಸುವ ವಿಧಾನ ನಮ್ಮ ಆರೋಗ್ಯಕ್ಕೆ ಮಾರಕ. ಜತೆಗೆ ಈಗಿನ ಹೈಬ್ರಿಡ್ ಬೆಳೆಗಳಲ್ಲಿ ಪೌಷ್ಟಿಕಾಂಶ ಕಡಿಮೆ. ಯುವ ಪೀಳಿಗೆ ಹೆಚ್ಚಾಗಿ ಸಿದ್ಧ ಆಹಾರಕ್ಕೆ ಮಾರುಹೋಗಿರುವುದು ಅಪೌಷ್ಠಿಕತೆಗೆ ಕಾರಣವಾಗಿದೆ ಎಂದರು.



ತಾಲೂಕಾ ಯೋಜನಾಧಿಕಾರಿ ಮಹಾಬಲೇಶ್ವರ ಪಟಗಾರ ಮಾತನಾಡಿ, ಹಸಿವಾದಾಗ ಮಾತ್ರ ಆಹಾರ ಸೇವಿಸಿ. ಆದರೆ ಅತಿಯಾಗಿ ತಿನ್ನಬೇಡಿ, ಹಸಿವು ತೀರಲು ಎಷ್ಟು ಬೇಕೋ ಅಷ್ಟು ಸತ್ವಯುತ ಆಹಾರ ಸೇವಿಸಬೇಕು. ನಮ್ಮ ದೇಹಕ್ಕೆ ಹೆಚ್ಚು ಮಾರಕವಾಗಿರುವ ಪದಾರ್ಥಗಳಲ್ಲಿ ಸಕ್ಕರೆ ಕೂಡ ಒಂದು. ಕೆಲವರಿಗೆ ಶಕ್ತಿ ನೀಡುವ ಸಕ್ಕರೆ, ದೇಹದಲ್ಲಿನ ಗ್ಲೂಕೋಸ್ ಪ್ರಮಾಣವನ್ನು ಕುಗ್ಗಿಸುತ್ತದೆ. ಪರಿಣಾಮ ಆಯಾಸ ಮತ್ತು ಮೆದುಳಿನ ತೊಂದರೆ ಕಾಣಿಸಿಕೊಳ್ಳುತ್ತದೆ. ಆದ್ದರಿಂದ ಸಕ್ಕರೆಯ ಬಳಕೆ ತಗ್ಗಿಸಿ. ಸಂಸ್ಕರಿಸಿದ ಆಹಾರ ಮತ್ತು ಹೆಚ್ಚು ಸಕ್ಕರೆ ಬಳಸಿ ಮಾಡಿದ ತಿನಿಸುಗಳು ನಮ್ಮ ಜೀವರಾಸಾಯನಿಕ ಕ್ರಿಯೆಗೆ ಹಾನಿಯುಂಟುಮಾಡುತ್ತವೆ. ಹೀಗಾಗಿ ನೈಸರ್ಗಿಕವಾಗಿ ಸಿಗುವ ಹಣ್ಣು, ಸೊಪ್ಪು, ತರಕಾರಿ ತಿನ್ನುವುದು ಉತ್ತಮವಾಗಿದೆ ಎಂದರು.

ಜಿಲ್ಲಾ ನಿರ್ದೇಶಕ ಕೇಶವ್ ದೇವಾಂಗ ಮಾತನಡಿ, ಯೋಜನೆಯ ಉದ್ದೇಶ ಮತ್ತು ರೂಪುರೇಷೆಗಳ ಬಗ್ಗೆ, ಸ್ವಾವಲಂಬನೆಯ ಉದ್ಯೋಗ ಮಾಡುವ ಬಗ್ಗೆ ಮಾಹಿತಿ ನೀಡಿದರು. ಜ್ಞಾನ ವಿಕಾಸ ಕೇಂದ್ರದಲ್ಲಿ ಪ್ರತಿ ತಿಂಗಳು ಸದ್ಯಸರಿಗೆ ಶಿಕ್ಷಣ, ಕಾನೂನಿನ ಅರಿವು, ಆರೋಗ್ಯ ಮತ್ತು ನೈರ್ಮಲ್ಯದ ಬಗ್ಗೆ ಮಾಹಿತಿಯನ್ನು ನಡೆಸಲಾಗುತ್ತದೆ ಎಂದು ತಿಳಿಸಿದರು.

ಗ್ರಾ.ಪಂ ಸದಸ್ಯೆ ಬಸಮ್ಮ ಟೆಕ್ಕೆದ, ಒಕ್ಕೂಟ ಅಧ್ಯಕ್ಷ ಬಸಮ್ಮ ಪಾಟೀಲ, ಜಿಲ್ಲಾ ರೈತ ಸಂಘದ ಗೌರವ ಕಾರ್ಯದರ್ಶಿ ಮಹದೇವಗೌಡ ಪಾಟೀಲ, ಶಿವನಗೌಡ ಪಾಟೀಲ, ತಿಪ್ಪನಗೌಡ ಹುಲ್ಲೂರ, ಗ್ರಾಮಸ್ಥರು ಇದ್ದರು.

ವಲಯದ ಮೇಲ್ವಿಚಾರಕ ಖಾದರ್‌ಸಾಬ್ ಸ್ವಾಗತಿಸಿದರು. ಸೇವಾ ಪ್ರತಿನಿಧಿ ಸುಮಿತ್ರಾ ಪ್ರಾರ್ಥಿಸಿದರು. ಜ್ಞಾನ ವಿಕಾಸ ಸಮನ್ವಯಾಧಿಕಾರಿ ಲಕ್ಷ್ಮೀ ನಿರೂಪಿಸಿದರು.

## ಭಾಗ್ಯಲಕ್ಷ್ಮಿ ಬಾಂಡ್ ಪರಿಪಕ್ವ ಮೊತ್ತ ಪಡೆಯಲು ದಾಖಲೆ ಸಲ್ಲಿಕೆಗೆ ಸೂಚನೆ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಭಾಗ್ಯಲಕ್ಷ್ಮಿ ಯೋಜನೆಯಡಿ 2006–07 ರಿಂದ ಬಿ.ಪಿ.ಎಲ್. ಕುಟುಂಬದಲ್ಲಿ ಜನಿಸಿ ನೋಂದಣಿಯಾಗಿ ಬಾಂಡ್ ಸೌಲಭ್ಯ ಪಡೆದಿರುವ ಫಲಾನುಭವಿಗಳು 18 ವರ್ಷ ಪೂರ್ಣಗೊಂಡಿರುವ ಹಿನ್ನೆಲೆಯ ಪರಿಪಕ್ವ ಮೊತ್ತವನ್ನು ಪಡೆಯಲು ಅರ್ಹರಾಗಿರುವ ಫಲಾನುಭವಿಗಳ ಖಾತೆಗೆ ನೇರವಾಗಿ ಜಮೆ ಮಾಡಲು ಅನುವಾಗುವಂತೆ ಓಖಅ ಯಿಂದ ರಚಿಸಲಾಗಿರುವ (Payment Module) ಪೇಮೆಂಟ್ ಮಾಡ್ಯೂಲ್ (ತಂತ್ರಾಂಶದಲ್ಲಿ) ಪ್ರಸ್ತಾವನೆಗಳನ್ನು ಸಲ್ಲಿಸಲು ದಿನಾಂಕ:31.10.2025 ರಂದು ಕೊನೆಯ ದಿನಾಂಕವಾಗಿದ್ದು, ಅರ್ಹ ಫಲಾನುಭವಿಗಳು ಅಗತ್ಯ ದಾಖಲಾತಿಗಳೊಂದಿಗೆ ಸಂಬಂಧಿಸಿದ ತಾಲೂಕು ಶಿಶು

ಅಭಿವೃದ್ಧಿ ಕಚೇರಿ /ಅಂಗನವಾಡಿ ಕೇಂದ್ರಗಳಿಗೆ ಸಂಪರ್ಕಿಸಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಮಿತಿ ರಚನೆಗೆ ಅರ್ಜಿ ಆಹ್ವಾನ

■ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ಬೀದಿ ಬದಿ ವ್ಯಾಪಾರಿಗಳ (ಜೀವನೋಪಾಯ ರಕ್ಷಣೆ ಮತ್ತು ಬೀದಿ ಬದಿ ವ್ಯಾಪಾರದ ನಿಯಂತ್ರಣ) ನಿಯಮಗಳನ್ವಯ ಕುಂದು ಕೊರತೆ ಪರಿಹಾರ ಸಮಿತಿಯನ್ನು ರಚಿಸಲು ಪುರಸಭೆ ಮುಂಡರಗಿ ವತಿಯಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸಮಿತಿಯ ಅಧ್ಯಕ್ಷ ಸ್ಥಾನಕ್ಕೆ ನಿವೃತ್ತ ಸಿವಿಲ್ ನ್ಯಾಯಾಧೀಶರು, ಸದಸ್ಯ ಸ್ಥಾನಕ್ಕೆ ರಾಜ್ಯದ ಒಬ್ಬ ನಿವೃತ್ತ ಗ್ರೇಡ "ಎ" ಅಧಿಕಾರಿ ಹಾಗೂ ಸ್ಥಳೀಯ ಅನೌಪಚಾರಿಕ ಆರ್ಥಿಕತೆಯಲ್ಲಿ ಅನುಭವ ಹೊಂದಿರುವ ಪ್ರಸಿದ್ಧ ಸಾಮಾಜಿಕ ಕಾರ್ಯಕರ್ತರಾಗಿರಬೇಕು. ಸಮಿತಿ ಅಧ್ಯಕ್ಷರ, ಸದಸ್ಯರ ಮಾನದಂಡಗಳು, ಗೌರವಧನ ಹಾಗೂ ಹೆಚ್ಚಿನ ಮಾಹಿತಿಗಾಗಿ ಮುಂಡರಗಿ ಪುರಸಭೆಯ ಡೇ ನಲ್ಮ್ ವಿಭಾಗದಲ್ಲಿ ಪಡೆಯಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

**ಜನಮನ ಸೆಳೆದ ಭಜನಾ ಸಂಘಗಳ, ಶಿವ ಶರಣರ ಭಾವಚಿತ್ರ ಮೆರವಣಿಗೆ**

# ಹಾಲಗೊಂಡ ಬಸವೇಶ್ವರ ರಥೋತ್ಸವ ಸಂಪನ್ನ

■ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ

ಕಲ್ಯಾಣ ಚಾಲುಕ್ಯರಸರ ಕಾಲದಲ್ಲಿ ನಿರ್ಮಾಣವಾದ ಇಲ್ಲಿಯ ಐತಿಹಾಸಿಕ ಹಾಲಗೊಂಡ ಬಸವೇಶ್ವರರ ಶತಮಾನ ರಥೋತ್ಸವವು ಶ್ರಾವಣ ಮಾಸದ ಕೊನೆಯ ಸೋಮವಾರ ಸಂಜೆ ಸಾವಿರಾರು ಭಕ್ತಾಧಿಗಳ ಭಕ್ತಿ ಭಾವದ ಮಧ್ಯೆ ಅದ್ದೂರಿಯಾಗಿ ಜರುಗಿತು.

ಬಜಾರ ರಸ್ತೆಯಲ್ಲಿ ಸಾಗಿದ ರಥೋತ್ಸವಕ್ಕೆ ಅಡ್ನೂರ ಬ್ರಹ್ಮನ್ಮಠದ ಶಿವಾಚಾರ್ಯರು ವಿಧಿ ವಿಧಾನಗಳೊಂದಿಗೆ ಪೂಜೆ ಸಲ್ಲಿಸಿ ಚಾಲನೆ ನೀಡಿದರು. ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ ಸಾವಿರಾರು ಭಕ್ತರು ತೇರಿಗೆ ಉತ್ತತ್ತಿ ಎಸೆದು ತಮ್ಮ ಭಕ್ತಿಯ ಸಂಕಲ್ಪವನ್ನು ಅರ್ಪಿಸಿದರು. ರಥೋತ್ಸವದಲ್ಲಿ ಭಾಗಿಯಾದ ಡೊಳ್ಳು ಕಲಾ ತಂಡದ ಡೊಳ್ಳು ಕುಣಿತದ ಪ್ರದರ್ಶನವು ಮನ ಸೆಳೆಯಿತು. ಶ್ರೀ ಕೃಷ್ಣ, ಬಸವೇಶ್ವರರು, ಅಲ್ಲಮಪ್ರಭುಗಳು, ಅಕ್ಕಮಹಾದೇವಿ, ಮರುಳ ಸಿದ್ದೇಶ್ವರರು, ಮಾರುತಿ, ಮಹಾಂತೇಶ್ವರ, ಮಲ್ಲಿಕಾರ್ಜುನ, ಲೆಕ್ಕದ ವೀರೇಶ್ವರ, ನಾಗಲಿಂಗೇಶ್ವರ, ಅನ್ನದಾನೀಶ್ವರರು, ಪಂಚಾಚಾರ್ಯರು ಸೇರಿದಂತೆ ನಾಡಿನ ಹಲವಾರು ಶಿವ ಶರಣರ ಭಾವಚಿತ್ರಗಳ ಮೆರವಣಿಗೆಯು ಜನ ಮನ ಸೆಳೆಯಿತು.



ಗ್ರಾಮದ 11 ವಾರ್ಡ್‌ಗಳ 13 ಭಜನಾ ಕಲಾ ತಂಡಗಳು ತಮ್ಮ ಇಷ್ಟ ದೇವರ ಭಾವಚಿತ್ರ ಮೆರವಣಿಗೆಯೊಂದಿಗೆ ತತ್ವ ಪದ, ಜಾನಪದ, ಸುಗ್ಗಿ ಪದ, ಭಕ್ತಿ ಪದಗಳನ್ನು ಹಾಡುತ್ತಾ ಪವಿತ್ರ ಶ್ರಾವಣ ಮಾಸದ ಕೊನೆಯ ಸೋಮವಾರವನ್ನು ಸಂಭ್ರಮಿಸಿದರು. ಗ್ರಾಮ ಪಂಚಾಯಿತಿಯು ಪ್ರತಿ ಭಜನಾ ಸಂಘಕ್ಕೆ ಸಂಪ್ರದಾಯದಂತೆ ಡಗ್ಗಾ ವಾದ್ಯ ಹಾಗೂ 10 ಕೆ.ಜಿ ಬೆಲ್ಲವನ್ನು ಕೊಡುಗೆಯಾಗಿ ನೀಡಿದರು.

> ಸರ್ವ ಧರ್ಮದವರು ಪಾಲ್ಗೊಂಡು ಶತಮಾನ ಕಂಡ ಐತಿಹಾಸಿಕ ಹಾಲಗೊಂಡ ಬಸವೇಶ್ವರ ಜಾತ್ರೆಯನ್ನು ಭಕ್ತಿ ಭಾವದಿಂದ ಆಚರಿಸಿ ಯಶಸ್ವಿಗೊಳಿಸಿದ್ದು, ಸಾವಿರಾರು ಭಕ್ತರು ತನು–ಮನ–ಧನದಿಂದ ಭಾಗವಹಿಸಿದ್ದಾರೆ.
>
> **– ಮಹೇಶ ಮುಸ್ಕಿನಭಾವಿ–ಜಾತ್ರಾ ಕಮಿಟಿ ಅಧ್ಯಕ್ಷರು.**
>
> **ನಜೀರ ಅಹ್ಮದ ಕಿರೀಟಗೇರಿ.**
>
> **– ಹಾಲಗೊಂಡ ಬಸವೇಶ್ವರ ಜಾತ್ರಾ ಕಮಿಟಿ ಕಾರ್ಯದರ್ಶಿ.**

ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಅನ್ನಪೂರ್ಣೇಶ್ವರಿ ಸತ್ಸಂಗ ಸಮಿತಿಯ ಆಶ್ರಯದಲ್ಲಿ, ರಾಘವೇಂದ್ರ ಕೊಪ್ಪಳ ಗುರೂಜಿ ಅವರ ನೇತೃತ್ವದಲ್ಲಿ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಮಹಾ ಮೃತ್ಯುಂಜಯ ಹೋಮ ನೆರವೇರಿತು. ಈ ಸಂದರ್ಭದಲ್ಲಿ ಅನ್ನಪೂರ್ಣೇಶ್ವರಿ ಪೂಜೆ, ಸತ್ಸಂಗದೊಂದಿಗೆ ಭಜನಾ ಕಾರ್ಯಕ್ರಮಗಳು ನೆರವೇರಿದವು. ಇದಕ್ಕೂ ಮುನ್ನ ಬಸವೇಶ್ವರ ಮೂರ್ತಿಗೆ ವಿಶೇಷ ಹೂವಿನ ಅಲಂಕಾರದೊಂದಿಗೆ ರುದ್ರಾಭಿಷೇಕ, ನಂತರ ಮಹಾ ಅನ್ನಸಂತರ್ಪಣೆ ನೆರವೇರಿತು.

## ಸಮಾಜಕ್ಕೆ ಮಠಗಳ ಕೊಡುಗೆ ಅಪಾರ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಧರ್ಮ ಜಾಗೃತಿ, ಸಂಘಟನೆ, ತ್ರಿವಿಧ ದಾಸೋಹ ಸೇವೆಯೊಂದಿಗೆ ಅನೇಕ ಸಮಾಜಮುಖಿ ಕಾರ್ಯಗಳ ಮೂಲಕ ಮಠ–ಮಾನ್ಯಗಳು ನಾಡಿಗೆ ಅಪಾರವಾದ ಕೊಡುಗೆಯನ್ನು ನೀಡಿವೆ ಎಂದು ಆದ್ರಳ್ಳಿ ಗವಿಸಿದ್ದೇಶ್ವರ ಮಠದ ಶ್ರೀ ಕುಮಾರ ಮಹಾರಾಜರು ಹೇಳಿದರು.

ಅವರು ತಾಲೂಕಿನ ಆದ್ರಳ್ಳಿ ಗವಿಸಿದ್ದೇಶ್ವರದ ಮಠದಲ್ಲಿ ಯಾತ್ರಿ ನಿವಾಸ, ದಾಸೋಹ ಮನೆ ನಿರ್ಮಾಣ ಕಾರ್ಯಕ್ಕೆ ಭೂಮಿಪೂಜೆ ನೆರವೇರಿಸಿ ಮಾತನಾಡಿದರು.

ಜನರಲ್ಲಿನ ಅಜ್ಞಾನ, ಮೂಢನಂಬಿಕೆ, ಅಂಧಾಚರಣೆಗಳನ್ನು ಹೋಗಲಾಡಿಸಿ ಧರ್ಮಪ್ರಜ್ಞೆ, ವೈಜ್ಞಾನಿಕ ಮನೋಭಾವ ಮೂಡಿಸುವ ಕಾರ್ಯವನ್ನು ಮಠ–ಮಾನ್ಯಗಳು ಮಾಡುತ್ತವೆ. ಮಠ–ಮಾನ್ಯಗಳು ಮಾಡುವ ಸಮಾಜಮುಖಿ ಕಾರ್ಯಗಳಿಗೆ ಭಕ್ತರ ಸಹಾಯ–ಸಹಕಾರ ಅಗತ್ಯವಾಗಿದೆ. ಮಠಗಳು ಯಾರೊಬ್ಬರ ಸ್ವತ್ತಲ್ಲ. ಬದಲಾಗಿ ಭಕ್ತರ ಕಷ್ಟ ಕಾರ್ಪಣ್ಯಗಳನ್ನು ದೂರ ಮಾಡುವ ಶಾಂತಿ, ನೆಮ್ಮದಿ, ನಂಬಿಕೆ, ಆತ್ಮಬಲ ತುಂಬುವ ಕೇಂದ್ರಗಳಾಗಿವೆ. ಗ್ರಾಮೀಣ ಭಾಗದ ಗುಡ್ಡದ ಪ್ರದೇಶದಲ್ಲಿರುವ ಗವಿಮಠಕ್ಕೆ ಬರುವ ಭಕ್ತರಿಗೆ ಪ್ರಸಾದ, ಶುದ್ಧ ಕುಡಿಯುವ ನೀರು, ವಿಶ್ರಾಂತಿ ಸೇರಿ ಕನಿಷ್ಠ ಸೌಲಭ್ಯವಾದರೂ ಕಲ್ಪಿಸುವ ಮತ್ತು ಗೋಶಾಲೆ ಮಾಡುವ ಉದ್ದೇಶ ತಮ್ಮದಾಗಿದೆ ಎಂದರು.

ರಾಣೇಬೆನ್ನೂರ ಮತಕ್ಷೇತ್ರದ ಮಾಜಿ ಶಾಸಕ ಅರುಣಕುಮಾರ ಪೂಜಾರ, ಕೆಪಿಸಿಸಿ ಪ್ರ. ಕಾರ್ಯದರ್ಶಿ ಸುಜಾತಾ ದೊಡ್ಡಮನಿ ಭೂಮಿಪೂಜೆಯಲ್ಲಿ ಪಾಲ್ಗೊಂಡು ಗವಿಮಠದ ಶ್ರೀ ಕುಮಾರ ಮಹಾರಾಜರು ಮಾಡುವ ಸಮಾಜಮುಖಿ ಕಾರ್ಯಗಳಿಗೆ ಸಾಧ್ಯವಾದಷ್ಟು ಸೇವೆ–ಸಹಾಯ–ಸಹಕಾರ ಮಾಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ ಎಂದರು.

ಭಕ್ತರಾದ ರಾಜು ಮಕರಿ, ವಿದ್ಯಾಧರ ಹಲಗೇರಿ, ಡಿಳ್ಳೆಪ್ಪ ಲಮಾಣಿ, ಶಿವಶಂಕರ್ ಕೆ, ಈರಪ್ಪ ರಾಹುತ, ಶಾರವ್ವ ಲಮಾಣಿ, ಮಾಮಿಸಾಬ ವಾಲಿಕಾರ, ಹನುಮಂತಗೌಡ ಪಾಟೀಲ, ಚನ್ನಪ್ಪ ಲಮಾಣಿ, ಉಡಚಮ್ಮ ಹರಿಜನ, ಮಂಜವ್ವ ಬಾರ್ಕಿ, ತಿಪ್ಪಣ್ಣ ತಳವಾರ, ನಾಗೇಶ ಲಮಾಣಿ, ಮಾಂತೇಶ ಪಾಟೀಲ, ಮಾನಪ್ಪ ಲಮಾಣಿ, ಕೋಟೆಪ್ಪ ಜಿನಕಿ, ಮುಕ್ಕಣ್ಣ ಚಿಂಚಲಿ ಇದ್ದರು.

## ಶ್ರೀಕೃಷ್ಣನ ಉಪದೇಶಗಳನ್ನು ಪಾಲಿಸಿ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಹಿಂದೂ ಧರ್ಮ/ಸಂಸ್ಕೃತಿಯ ಪವಿತ್ರ ಗ್ರಂಥವಾದ ಭಗವದ್ಗೀತೆಯಲ್ಲಿ ಶ್ರೀ ಕೃಷ್ಣ ಪರಮಾತ್ಮನು ಉಪದೇಶಿಸಿದ ಸತ್ಯ ಸಂದೇಶಗಳನ್ನು ಪ್ರತಿಯೊಬ್ಬರೂ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದು ಲಕ್ಷ್ಮೇಶ್ವದ ಅಗಡಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಚಾರ್ಯ ಡಾ. ಪರಶುರಾಮ ಬಾರ್ಕಿ ಹೇಳಿದರು.

ಅವರು ಶ್ರೀ ಕೃಷ್ಣ ಜನ್ಮಾಷ್ಟಮಿಯಂದು ಪಟ್ಟಣದ ಶ್ರೀ ವೆಂಕಟೇಶ್ವರ ದೇವಸ್ಥಾನದಲ್ಲಿ ಶ್ರೀ ಕೃಷ್ಣನಿಗೆ ಅಭಿಷೇಕ, ತೊಟ್ಟಿಲಲ್ಲಿ ಹಾಕುವ, ಮಡಿಕೆ ಒಡೆಯುವ ಹಾಗೂ ಪಲ್ಲಕ್ಕಿ ಉತ್ಸವ ಕಾರ್ಯಕ್ರಮದ ವೇಳೆ ಮಾತನಾಡಿದರು. ಭಗವದ್ಗೀತೆಯ ಸಂದೇಶದಂತೆ ಪ್ರತಿಯೊಬ್ಬರೂ ತಮ್ಮ ಪಾಲಿನ ಕರ್ತವ್ಯಗಳನ್ನು ಪ್ರತಿಫಲಾಪೇಕ್ಷೆಯಿಲ್ಲದೇ ನಿಭಾಯಿಸಬೇಕು. ಅದಕ್ಕೆ ತಕ್ಕ ಸತ್ಫಲ ಸಿಕ್ಕೇ ಸಿಗುತ್ತದೆ. ಶ್ರೀಕೃಷ್ಣ ಪರಮಾತ್ಮ ಹೇಳಿದಂತೆ ನಮ್ಮ ಪಾಲಿನ ಕರ್ತವ್ಯವನ್ನು ಸತ್ಯ, ಧರ್ಮ, ನಿಷ್ಠೆಯಿಂದ ಮಾಡಬೇಕು. ಶ್ರೀಕೃಷ್ಣ ಪರಮಾತ್ಮನ ಜೀವನ, ಸಂದೇಶ, ಕಾರ್ಯ ಸಾಧಿಸುವ ಪರಿ, ಚಾಣಾಕ್ಷತನ, ಸಮಯ ಪ್ರಜ್ಞೆ ಸದಾ ಅನುಕರಣೀಯ. ಶಾಂತಿ, ನೆಮ್ಮದಿ, ಸಂತೋಷ, ಸ್ಫೂರ್ತಿ, ಕೀರ್ತಿ, ಯಶಸ್ಸಿಗೆ ಪ್ರೇರಕ ಶ್ರೀಕೃಷ್ಣ ಪರಮಾತ್ಮನಾಗಿದ್ದಾನೆ ಎಂದರು.

ಈ ವೇಳೆ ಸೋಮೇಶ್ವರ ದೇವಸ್ಥಾನ ಭಕ್ತರ ಕಮಿಟಿ ಅಧ್ಯಕ್ಷ ಗುರುರಾಜ ಪಾಟೀಲ ಕುಲಕರ್ಣಿ, ಎಪಿಎಂಸಿ ಕಾರ್ಯದರ್ಶಿ ರುದ್ರಗೌಡ ಪಾಟೀಲ, ದೇವಸ್ಥಾನ ಟ್ರಸ್ಟ್‌ನ ಪ್ರೊ. ವಿಕ್ರಂ ಶಿರೋಳ, ಕೋಆರ್ಡಿನೇಟರ್ ಅರುಣ ಕುಮಾರ್ ಜೋಶಿ, ಅರ್ಚಕರಾದ ವರದರಾಜ್ ಒಡವಿ, ಮ್ಯಾನೇಜರ್ ರಮೇಶ ಬಾವಿಕಟ್ಟಿ ಸೇರಿ ಭಕ್ತರು ಇದ್ದರು.

**ಗಮನ ಸೆಳೆದ ರಾಧಾ–ಕೃಷ್ಣ ವೇಷ ಭೂಷಣ ಸ್ಪರ್ಧೆ । ಮುಸ್ಲಿಂ ಸಮುದಾಯದ ರಾಧಾ–ಕೃಷ್ಣರೂ ಭಾಗಿ**

# ಲಕ್ಕುಂಡಿಯಲ್ಲಿ ಸಂಭ್ರಮದ ಶ್ರೀಕೃಷ್ಣ ಜನ್ಮಾಷ್ಟಮಿ

■ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ

ಪುಟ್ಟ ಮಕ್ಕಳ ರಾಧಾ–ಕೃಷ್ಣರ ವೇಷ ಭೂಷಣ, ವಿವಿಧ ಜಾನಪದ ಕಲಾ ತಂಡಗಳ ಪ್ರದರ್ಶನ, ಒಂದೇ ಬಣ್ಣದ ಸೀರೆಯುಟ್ಟು ಕುಂಭ ಹೊತ್ತ ಸುಮಂಗಲೆಯರು, ಶ್ರೀಕೃಷ್ಣ ಮೂರ್ತಿಯ ಭವ್ಯ ಮೆರವಣಿಗೆಗಳು ಜನಮನ ಸೆಳೆದವು.

ಭಾನುವಾರ ಇಲ್ಲಿಯ ಶ್ರೀಕೃಷ್ಣ ಯುವಕ ಮಂಡಳ ಹಾಗೂ ಯಾದವ ಸಮಾಜವು ಹಮ್ಮಿಕೊಂಡ 37ನೇ ವರ್ಷದ ಶ್ರೀಕೃಷ್ಣ ಜನ್ಮಾಷ್ಟಮಿ ಅಂಗವಾಗಿ ಶ್ರೀಕೃಷ್ಣ ದೇವಸ್ಥಾನದ ಆವರಣದಲ್ಲಿ 24 ಬಾಲ ಜೋಡಿ ರಾಧಾ–ಕೃಷ್ಣರ ವೇಷ ಭೂಷಣಗಳ ಸ್ಪರ್ಧೆಯು ಗಮನ ಸೆಳೆಯಿತು. ಸುಮಂಗಲಿಯರ ಪೂರ್ಣ ಕುಂಭದೊಂದಿಗೆ ಶ್ರೀಕೃಷ್ಣನ ಮೂರ್ತಿಯನ್ನು ಗ್ರಾಮದ ಪ್ರಮುಖ ಬೀದಿಯಲ್ಲಿ ಮೆರವಣಿಗೆ ಮಾಡಲಾಯಿತು.

ಮೆರವಣಿಗೆಯ ನಂತರ ಕೃಷ್ಣ ದೇವಸ್ಥಾನದ ಆವರಣದಲ್ಲಿ ಎತ್ತರಕ್ಕೆ ಕಟ್ಟಿದ 5 ಮೊಸರು ಗಡಿಗೆಗಳನ್ನು ಶ್ರೀ ಕೃಷ್ಣ ವೇಷಧಾರಿ ತನ್ನ ಕೊಳಲಿನಿಂದ ಒಡೆದಾಗ, ಗಡಿಗಿಯಲ್ಲಿದ್ದ ಮೊಸರನ್ನು ಸೇರಿದ್ದ ನೂರಾರು ಭಕ್ತರು ಪ್ರಸಾದವಾಗಿ ಸ್ವೀಕರಿಸಿ ತಮ್ಮ ಭಕ್ತಿಯನ್ನು ಸಮರ್ಪಿಸಿದರು. ಇದಕ್ಕೂ ಪೂರ್ವ ದೇವಸ್ಥಾನದಲ್ಲಿಯ ಶ್ರೀಕೃಷ್ಣ ಮೂರ್ತಿಯನ್ನು ಅಲಂಕರಿಸಿ ವಿಧಿ–ವಿಧಾನಗಳೊಂದಿಗೆ ವಿಶೇಷ ಅಭಿಷೇಕ ನೆರವೇರಿಸಲಾಯಿತು.



> ಕಳೆದ 37 ವರ್ಷಗಳಿಂದ ಕೃಷ್ಣ ಜನ್ಮಾಷ್ಟಮಿಯನ್ನು ಆಚರಣೆ ಮಾಡುತ್ತಾ ಬರಲಾಗುತ್ತಿದೆ. ಶ್ರೀ ಕೃಷ್ಣನ ಮಹಿಮೆ ಅಪಾರವಾಗಿದ್ದು, ಗ್ರಾಮದ ಸರ್ವ ಧರ್ಮದವರು ಪಾಲ್ಗೊಂಡು ಶ್ರೀ ಕೃಷ್ಣನ ಕೃಪೆಗೆ ಪಾತ್ರರಾಗಿದ್ದಾರೆ.
>
> **– ರಾಜು ಬೆಂತೂರು, ಕುಮಾರ ಹಟ್ಟಿ. ಶ್ರೀಕೃಷ್ಣ ಯುವಕ ಮಂಡಳದ ಸದಸ್ಯರು.**

ಕೃಷ್ಣ ಜನ್ಮಾಷ್ಟಮಿಯ ಅಂಗವಾಗಿ ದೇವಸ್ಥಾನದ ಆವರಣದಲ್ಲಿ ಬೆಳಿಗ್ಗೆ 7ರಿಂದ 8ರವರೆಗೂ ಮಹಿಳೆಯರಿಗಾಗಿ ರಂಗೋಲಿ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. 50 ಮಹಿಳೆಯರು ಸ್ಪರ್ಧೆಯಲ್ಲಿ ಭಾಗವಹಿಸಿ ವಿವಿಧ ಬಣ್ಣಗಳೊಂದಿಗೆ ಶ್ರಿಕೃಷ್ಣನ ವಿವಿಧ ಭಂಗಿಯ ರಂಗೋಲಿ ಹಾಗೂ ವಿವಿಧ ಚಿತ್ತಾರಗಳ ರಂಗೋಲಿಯನ್ನು ಬಿಡಿಸಿದರು. ಚಿತ್ರಕಲಾ ಶಿಕ್ಷಕರಾದ ಶಾರದಾ ಮುಂಡೆವಾಡೆ, ರಮೇಶ ಹಾದಿಮನಿ, ಜೈಶೀಲಾ ಜ್ಯೋತಿ ಹಾಗೂ ಕೃಷ್ಣ ವೇಷ–ಭೂಷಣದ ಸ್ಪರ್ಧೆಗೆ ಶಿಕ್ಷಕರಾದ ಮಲ್ಲಮ್ಮ ಹೂಗಾರ, ರೇಷ್ಮಾ ನದಾಫ್ ನಿರ್ಣಾಯಕರಾಗಿ ಆಗಮಿಸಿದ್ದರು.

ರಾಧಾ–ಕೃಷ್ಣ ಜನ್ಮಾಷ್ಟಮಿ ವೇಷ ಭೂಷಣ ಸ್ಪರ್ಧೆಯ 24 ಜೋಡಿಯಲ್ಲಿ ಮುಸ್ಲಿಂ ಸಮುದಾಯದ ಮಕ್ಕಳೂ ಭಾಗವಹಿಸಿದ್ದು ವಿಶೇಷವಾಗಿತ್ತು. ನಾಜಿಮಾಬಾನು ಲಕ್ಕಲಕಟ್ಟಿ, ಆಯೆರಾ ಹಿರೇಮನಿ ರಾದ–'ಯಾಗಿ ಹಾಗೂ ಅಸೀಮ್ ಹಿರೇಮನಿ ಕೃಷ್ಣನ ವೇಷವನ್ನು ಧರಿಸಿ ಸ್ಪರ್ಧೆಯಲ್ಲಿ ಪಾಲ್ಗೊಂಡು ಭಾವೈಕ್ಯತೆ ಮೆರೆದರು.

### ರೈತ ಸಮುದಾಯಕ್ಕೆ ಬೆಳೆವಿಮೆ, ಬೆಳೆಹಾನಿ ಪರಿಹಾರ ಕಲ್ಪಿಸುವಂತೆ ಆಗ್ರಹಿಸಿ ರೈತಪರ ಸಂಘಟನೆಗಳಿಂದ ಮನವಿ

# ಸಂಕಷ್ಟದ ಸುಳಿಯಲ್ಲಿರುವ ರೈತರ ಹಿತ ಕಾಪಾಡಿ

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಸತತ ಮಳೆಯಿಂದ ಮುಂಗಾರಿನ ಪ್ರಮುಖ ವಾಣಿಜ್ಯ ಬೆಳೆ ಹೆಸರು ಸೇರಿ ಬಹುತೇಕ ಬೆಳೆಗಳು ಹಾಳಾಗಿದ್ದು, ರೈತರು ಆರ್ಥಿಕ ಸಂಕಷ್ಟಕ್ಕೊಳಗಾಗಿದ್ದಾರೆ. ಬದುಕು ಸಾಗಿಸುವುದು ಹೇಗೆಂಬ ಚಿಂತೆಯಲ್ಲಿರುವ ರೈತ ಸಮುದಾಯಕ್ಕೆ ಆದಷ್ಟು ಬೇಗ ಬೆಳೆವಿಮೆ, ಬೆಳೆಹಾನಿ ಪರಿಹಾರ ಕಲ್ಪಿಸಬೇಕು ಎಂದು ಆಗ್ರಹಿಸಿ ವಿವಿಧ ರೈತ ಸಂಘಟನೆಗಳ ಮೂಲಕ ರೈತರು ಮಂಗಳವಾರ ಲಕ್ಷ್ಮೇಶ್ವರದಲ್ಲಿ ಪಾದಯಾತ್ರೆ ನಡೆಸಿ, ತಹಸೀಲ್ದಾರ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಬೆಳಿಗ್ಗೆ ಪಟ್ಟಣದ ಸೋಮೇಶ್ವರ ದೇವಸ್ಥಾನದಲ್ಲಿ ಸಭೆ ಸೇರಿದ ತಾಲೂಕಿನ ರೈತ ಸಂಘಟನೆಗಳ ಮುಖಂಡರು ಮತ್ತು ಲಕ್ಷ್ಮೇಶ್ವರ ಸೇರಿ ವಿವಿಧ ಗ್ರಾಮಗಳ ರೈತರು ಮಳೆಯಿಂದಾಗಿರುವ ಸಮಸ್ಯೆ ಮತ್ತು ಪರಿಹಾರೋಪಾಯಗಳ ಕುರಿತು ಚರ್ಚಿಸಿದರು. ಬಳಿಕ ಸೋಮೇಶ್ವರ ದೇವಸ್ಥಾನದಿಂದ ಪಟ್ಟಣದ ಮುಖ್ಯ ಬಜಾರ್ ರಸ್ತೆಯ ಮೂಲಕ ತಹಸೀಲ್ದಾರ ಕಚೇರಿವರೆಗೆ ಪಾದಯಾತ್ರೆಯಲ್ಲಿ ತೆರಳಿ ಮನವಿ ಸಲ್ಲಿಸಿದರು.

ಜೂನ್ ತಿಂಗಳಲ್ಲಿ ಬಿತ್ತನೆ ಮಾಡಿರುವ ಮುಂಗಾರಿನ ಪ್ರಮುಖ ಬೆಳೆಗಳಾದ ಹೆಸರು, ಹತ್ತಿ, ಶೇಂಗಾ, ಈರುಳ್ಳಿ, ಬೆಳ್ಳುಳ್ಳಿ, ಮೆಣಸಿನಕಾಯಿ, ಮೆಕ್ಕೆಜೋಳ ಸೇರಿ ತೋಟಗಾರಿಕೆಯ ಬೆಳೆಗಳನ್ನು ರೈತರು ರೋಗಬಾಧೆ ಸೇರಿ ಹತ್ತಾರು ಸಂಕಷ್ಟಗಳ ನಡುವೆಯೂ 80 ದಿನಗಳ ಕಾಲ ಸಾವಿರಾರು ಖರ್ಚು ಮಾಡಿ ಸಂರಕ್ಷಣೆ ಮಾಡಿಕೊಂಡಿದ್ದರು. ಇದೀಗ ಸತತ ಮಳೆಯಿಂದ ಅಳಿದುಳಿದ ಬೆಳೆಗಳೂ ಹಾಳಾಗಿದ್ದು ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿದೆ. ಬದುಕೇ ಕಷ್ಟವಾದ ಪರಿಸ್ಥಿತಿಯಲ್ಲಿರುವ ರೈತರಿಗೆ ಭವಿಷ್ಯದ ಚಿಂತೆಯೊಂದಿಗೆ ದಿಕ್ಕು ತೋಚದ ಸ್ಥಿತಿಯಲ್ಲಿದ್ದಾರೆ.

ಮುಗ್ಧ ರೈತರನೇಕರು ಬೆಳೆವಿಮೆ, ಬೆಳೆ ದೃಢೀಕರಣದಿಂದ ಹೊರಗುಳಿದಿದ್ದಾರೆ. ಹಿಂಗಾರಿಗೆ ಮತ್ತೆ ಭೂಮಿ ಹದಗೊಳಸಬೇಕು. ಆದ್ದರಿಂದ ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಸರ್ಕಾರ ರೈತರ ಸಂಕಷ್ಟಕ್ಕೆ ಸ್ಪಂದಿಸಬೇಕು.



ಕೃಷಿ, ಕಂದಾಯ, ತೋಟಗಾರಿಕೆ ಅಧಿಕಾರಿಗಳು ಕಚೇರಿಯಿಂದ ಹೊರ ಬಂದು ರೈತರ ಬೆಳೆಹಾನಿ ವೀಕ್ಷಿಸಿ ಸರ್ಕಾರಕ್ಕೆ ಸತ್ಯಾಂಶದ ವರದಿ ಸಲ್ಲಿಸಬೇಕು. ಈ ಬಗ್ಗೆ ರೈತರು ಮಾಡಬೇಕಾದ ಕೆಲಸದ ಬಗ್ಗೆ ಗ್ರಾಮ ಮಟ್ಟದಲ್ಲಿ ಡಂಗುರ ಸಾರಬೇಕು. ಬೆಳೆ ವಿಮಾ ಕಂಪನಿಗಳು ಇಲ್ಲಸಲ್ಲದ ಮಾನದಂಡ, ನಿಯಮಗಳನ್ನು ವಿಧಿಸಿ ರೈತರು ಬೆಳೆವಿಮೆಯಿಂದ ವಂಚಿತರಾಗದಂತೆ ನೋಡಿಕೊಳ್ಳಬೇಕು.

ಮನವಿ ಸ್ವೀಕರಿಸಿದ ತಹಸೀಲ್ದಾರ ಧನಂಜಯ ಎಂ ಮಾತನಾಡಿ, ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳು ಬೆಳೆಹಾನಿ ಪ್ರದೇಶಗಳ ವೀಕ್ಷಣೆ ಮಾಡಿ ಮಾಹಿತಿ ಸಂಗ್ರಹಿಸುತ್ತಿದ್ದಾರೆ. ಸಂಪೂರ್ಣ ವರದಿ ಕ್ರೋಢೀಕರಿಸಿ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಗುವುದು. ಕೃಷಿ, ಕಂದಾಯ, ತೋಟಗಾರಿಕೆ, ಇನ್ಸೂರೆನ್ಸ್ ಕಂಪನಿಗಳ ಅಧಿಕಾರಿಗಳನ್ನೊಳಗೊಂಡ ರೈತರ ಕುಂದು-ಕೊರತೆ ಸಭೆ ಕರೆದು ಚರ್ಚಿಸಲಾಗುವುದು ಎಂದರು.

ರೈತರ ಆತ್ಮಹತ್ಯೆ ತಡೆಯುವ ನಿಟ್ಟಿನಲ್ಲಿ ಬ್ಯಾಂಕಿನವರು ಸಾಲ ಮರುಪಾವತಿಗೆ ಒತ್ತಾಯಿಸದಂತೆ ನಿರ್ದೇಶಿಸಬೇಕು. ಸತತ ಮಳೆಯಿಂದ ಮನೆಗಳು ಬಿದ್ದಿವೆ. ಕೃಷಿ ಕೆಲಸಗಳು ಸ್ಥಗಿತಗೊಂಡಿವೆ. ದನ-ಕರುಗಳ ನಿರ್ವಹಣೆ ಮತ್ತು ಕುಟುಂಬದ ನಿರ್ವಹಣೆ ಕಷ್ಟವಾಗಿದೆ. ಒಟ್ಟಿನಲ್ಲಿ ಸಂಕಷ್ಟದ ಸುಳಿಯಲ್ಲಿ ಸಿಕ್ಕು ಒದ್ದಾಡುತ್ತಿರುವ ರೈತರ ಹಿತ ಕಾಪಾಡುವ ಕೆಲಸವನ್ನು ಸಂಬಂಧಪಟ್ಟ ಅಧಿಕಾರಿಗಳು, ಜನಪ್ರತಿನಿಧಿಗಳು ಮಾಡಬೇಕು ಎಂದು ಮನವಿ ಮಾಡಿದರು.

ಈ ವೇಳೆ ಕೃಷಿಕ ಸಮಾಜದ ತಾಲೂಕಾಧ್ಯಕ್ಷ ಚನ್ನಪ್ಪ ಷಣ್ಮುಕಿ, ಭಾರತೀಯ ಕಿಸಾನ್ ಸಂಘದ ಜಿಲ್ಲಾ ಉಪಾಧ್ಯಕ್ಷ ಟಾಕಪ್ಪ ಸಾತಪುತೆ, ಕಿಸಾನ್ ಜಾಗೃತಿ ವಿಕಾಸ ಸಂಘದ ತಾಲೂಕಾಧ್ಯಕ್ಷ ಶಿವಾನಂದ ಲಿಂಗಶೆಟ್ಟಿ, ಹಸಿರು ಸೇನೆ ಜಿಲ್ಲಾ ಗೌರವಾಧ್ಯಕ್ಷ ಸುರೇಶ ಶಿಂಧಗಿ, ತಾಲೂಕಾಧ್ಯಕ್ಷ ನಾಗರಾಜ ಕಳ್ಳಿಹಾಳ, ಕಿಸಾನ್ ಜಾಗೃತ ವಿಕಾಸ ಸಂಘದ ತಾಲೂಕಾಧ್ಯಕ್ಷ ಸಂಜೀವ ಹುಡೇದ, ಶಿವಪುತ್ರಪ್ಪ ತಾರಿಕೊಪ್ಪ, ಆನಂದ ಅಮರಶೆಟ್ಟಿ, ಮಾದೇವಪ್ಪ ಕುಂದಗೋಳ, ಶಂಕ್ರಣ್ಣ ಬ್ಯಾಡಗಿ, ಬಸಪ್ಪ ಧರ್ಮಂತರ, ಹೊಳಲಪ್ಪ ಹಾವನೂರ, ಬಸವರಾಜ ಗಡೇದ, ಗುರುರಾಜ ಬಡಿಗೇರ, ಶಿವಪ್ಪ ಸೂಸರವಿ, ಜೆ.ವಿ. ಪಾಟೀಲ, ಎಫ್.ಟಿ. ಸಂಕನಗೌಡ್ರ, ವಿ.ಎನ್. ಕೋಳಿವಾಡ, ಡಿ.ಬಿ. ದಾನಿ, ಎಸ್.ಎಸ್. ರಾಯನಗೌಡ್ರ ಸೇರಿ ಅನೇಕರಿದ್ದರು.

> ಈ ವರ್ಷ ಹವಾಮಾನ ವೈಪರಿತ್ಯ, ರೋಗಬಾಧೆಯಿಂದ ಅಪಾರ ಪ್ರಮಾಣ ಬೆಳೆಹಾನಿಯಾಗಿದೆ. ರೈತರು ಕೊಟ್ಟ ಮನವಿ ಪತ್ರಗಳಿಗೆ ಕಿಮ್ಮತ್ತಿಲ್ಲದಂತಾಗುತ್ತಿದೆ. ಕಳೆದ 20 ದಿನಗಳಿಂದ ಸುರಿಯುತ್ತಿರುವ ದಾಖಲೆ ಸಹಿತ ಮಳೆಯಿಂದ ಬೆಳೆ ಹಾನಿಯಾಗಿದ್ದರೂ ಸಂಬಂಧಪಟ್ಟ ಯಾವ ಅಧಿಕಾರಿಗಳೂ ರೈತರ ಜಮೀನಿಗೆ ಭೇಟಿ ನೀಡಿಲ್ಲ. ಹಾನಿಯಾದ ಅರಿವೂ ಇಲ್ಲದಂತೆ ವರ್ತಿಸುತ್ತಿದ್ದಾರೆ. ಈ ನಿಟ್ಟಿನಲ್ಲಿ ರೈತರು ಸಂಘಟಿತರಾಗಬೇಕು. ರೈತರ ನ್ಯಾಯಯುತ ಬೇಡಿಕೆಗಳಿಗೆ ಸ್ಪಂದಿಸದಿದ್ದರೆ ಜಿಲ್ಲೆಯಾದ್ಯಂತ ಬೀದಿಗಿಳಿದು ಹೋರಾಟ ನಡೆಸಬೇಕಾಗುತ್ತದೆ.
>
> **– ಸುರೇಶ ಶಿಂಧಗಿ.**
> ಹಸಿರು ಸೇನೆ ಜಿಲ್ಲಾ ಗೌರವಾಧ್ಯಕ್ಷರು.

## ಸಡಗರದ ಶ್ರೀ ಮೌನೇಶ್ವರರ ರಥೋತ್ಸವ



**■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ**

ಶ್ರಾವಣ ಮಾಸದ ಕೊನೆಯ ಸೋಮವಾರ ಆ.18ರಂದು ಸಂಜೆ ಶಿರಹಟ್ಟಿ ತಾಲೂಕಿನ ಸುಕ್ಷೇತ್ರ ವರವಿಯಲ್ಲಿ ಕ್ಷೇತ್ರಾಧಿಪತಿ ಶ್ರೀ ಮೌನೇಶ್ವರರ ಮಹಾರಥೋತ್ಸವವು ಸಹಸ್ರಾರು ಭಕ್ತರ ಪಾಲ್ಗೊಳ್ಳುವಿಕೆಯೊಂದಿಗೆ ಸಂಭ್ರಮದಿಂದ ಜರುಗಿತು.

ರಥೋತ್ಸವದ ನಿಮಿತ್ತ ಬೆಳಿಗ್ಗೆ 6.15ಕ್ಕೆ ಧ್ವಜಾರೋಹಣ, ಬೆಳಿಗ್ಗೆ 9ರಿಂದ 11ರವರೆಗೆ ಹುಬ್ಬಳ್ಳಿಯ ಶಂಕರಾಚಾರ್ಯ ಕಡ್ಲಾಸ್ಕರ ಮತ್ತು ಮುಕುಂದಾಚಾರ್ಯ ಗುರುವಿನ ನೇತೃತ್ವದಲ್ಲಿ ಮಹಾಯಜ್ಞ ನಡೆಯಿತು. ಸಂಜೆ 5.30ರ ಹೊತ್ತಿಗೆ ಮೌನೇಶ್ವರರ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯೊಂದಿಗೆ ಭವ್ಯ ಮೆರವಣಿಗೆ ಮೂಲಕ ರಥದ ಬೀದಿಗೆ ತರಲಾಯಿತು. ಸಂಪ್ರದಾಯದಂತೆ ಪೂಜೆಯನ್ನು ನೆರವೇರಿಸಿ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ಭಕ್ತರು ಉತ್ತತ್ತಿ, ಬಾಳೆ ಹಣ್ಣನ್ನು ರಥಕ್ಕೆ ಎಸೆದು ತಮ್ಮ ಭಕ್ತಿಯನ್ನು ಸಮರ್ಪಿಸಿದರು. ಗರ್ಭಗುಡಿಯಲ್ಲಿ ವಿಶೇಷವಾಗಿ ಅಲಂಕೃತಗೊಂಡ ಶ್ರೀ ಮೌನೇಶ್ವರರ ಉದ್ಭವಮೂರ್ತಿಯ ದರ್ಶನವನ್ನು ಭಕ್ತರು ಸರತಿ ಸಾಲಿನಲ್ಲಿ ನಿಂತು ಪಡೆದುಕೊಂಡರು. ರಥೋತ್ಸವದಲ್ಲಿ ನಂದಿಧ್ವಜ, ಸಮ್ಮಾಳ, ಡೊಳ್ಳಿನ ಮಜಲುಗಳು ಪಾಲ್ಗೊಂಡಿದ್ದವು. ವರವಿಯ ಶ್ರೀ ಮೌನೇಶ್ವರ ಸ್ವಾಮೀಜಿ ಹಾಗೂ ಶ್ರೀಮಠದ ವಿಕಾಸ ಟ್ರಸ್ಟ್‌ನ ಅಧ್ಯಕ್ಷ-ಉಪಾಧ್ಯಕ್ಷರು ಮತ್ತು ಸದಸ್ಯರು, ಗ್ರಾ.ಪಂ ಸದಸ್ಯರು ಹಾಗೂ ಭಕ್ತರು ಪಾಲ್ಗೊಂಡಿದ್ದರು.

### ಬಿಡದೇ ಸುರಿಯುತ್ತಿರುವ ಮಳೆಗೆ ಕೃಷಿ ಕೂಲಿಕಾರರ ಬದುಕು ಚಿಂತಾಜನಕ

# ಮಳೆಗೆ ಅಂಜಿದ ಲಕ್ಷ್ಮೇಶ್ವರ

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಕಳೆದ 15-20 ದಿನಗಳಿಂದ ಸುರಿಯುತ್ತಿರುವ ಮಳೆಯಿಂದಾಗಿ ಸಾಕಷ್ಟು ಬೆಳೆಹಾನಿ ಸಂಭವಿಸಿದೆ. ರಸ್ತೆ ಸಂಚಾರ ಅಸ್ತವ್ಯಸ್ಥಗೊಂಡಿದೆ. ಕೃಷಿ ಕೆಲಸಗಳು ಸ್ಥಗಿತಗೊಂಡಿವೆ. ವ್ಯಾಪಾರ-ವಹಿವಾಟು, ಶಿಕ್ಷಣ ಸೇರಿ ಇತರೆಲ್ಲ ಚಟುವಟಿಕೆಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿ ಜನಜೀವನ ಸಂಪೂರ್ಣ ಅಸ್ತವ್ಯಸ್ತವಾಗಿದೆ. ಸೋಮವಾರ ಮತ್ತು ಮಂಗಳವಾರ 2 ದಿನಗಳು ಒಂದಿಷ್ಟೂ ಬಿಡುವು ಕೊಡದಂತೆ ಜಡಿ ಮಳೆ ಸುರಿದಿದ್ದು ಜನರನ್ನು ಚಿಂತೆಗೀಡು ಮಾಡಿದೆ.

ನಿರಂತರ ಮಳೆಯಿಂದ ಮಣ್ಣಿನ ಮತ್ತು ಹಳೆಯದಾದ ಕಾಂಕ್ರಿಟ್ ಮನೆಗಳೂ ಸಹ ಸೋರುತ್ತಿವೆ. ಸೋರುವುದನ್ನು ತಪ್ಪಿಸಲು ಸಾವಿರಾರು ಖರ್ಚು ಮಾಡಿ ಪ್ಲಾಸ್ಟಿಕ್, ತಾಡಪತ್ರಿ ಖರೀದಿಸಿ ಮನೆಯ ಮೇಲೆ ಹೊದಿಸಿದ್ದರೂ ಸೋರಿಕೆ ತಪ್ಪುತ್ತಿಲ್ಲ ಮತ್ತು ಮಳೆಯೂ ನಿಲ್ಲುತ್ತಿಲ್ಲವಾದ್ದರಿಂದ ಜನತೆ ಪಡಬಾರದ ಯಾತನೆ ಅನುಭವಿಸುತ್ತಿದ್ದಾರೆ. ರೈತರಿಗೆ ಜಾನುವಾರುಗಳ ಪೋಷಣೆ ಕಷ್ಟವಾಗಿದೆ. ತಾಲೂಕಿನಾದ್ಯಂತ 25ಕ್ಕೂ ಹೆಚ್ಚು ಮನೆಗಳು ಬಿದ್ದಿರುವ ಬಗ್ಗೆ ತಾಲೂಕಾಡಳಿತ ಮಾಹಿತಿ ನೀಡಿದೆ. ಆದರೆ ನಿರಾಶ್ರಿತರಿಗೆ ಯಾವುದೇ ಪರ್ಯಾಯ ವ್ಯವಸ್ಥೆ ಮಾಡದ್ದರಿಂದ ಅವರ ಗೋಳು ಹೇಳತೀರದಾಗಿದೆ.

ಮಳೆ ಪ್ರಾರಂಭಗೊಂಡ 15-20 ದಿನಗಳಿಂದ ಬಿಸಿಲೇ ಇಲ್ಲದ ಕಾರಣ ತೊಳೆದು ಹಾಕಿದ ಬಟ್ಟೆಗಳು ಒಣಗುತ್ತಿಲ್ಲ. ದಿನವೂ ಶಾಲೆಗೆ ಹೋಗುವ ಮಕ್ಕಳು, ನೌಕರವರ್ಗದವರು ಹಳೆಯದಾದ ಬಟ್ಟೆಯನ್ನು ಧರಿಸಿ ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಮಕ್ಕಳ ಶಾಲಾ ಯೂನಿಫಾರ್ಮ್‌ಗಳನ್ನು ಸಿದ್ಧಪಡಿಸಲು ತಾಯಂದಿರು ಪರದಾಡುತ್ತಿದ್ದಾರೆ. ಮನೆಯ ಒಳಗಡೆಯೇ ಹಗ್ಗ ಕಟ್ಟಿ ಒಣಹಾಕಿರುವ ಬಟ್ಟೆಗಳು ನಾಲ್ಕೈದು ದಿನ ಕಳೆದರೂ ಒಣಗುತ್ತಿಲ್ಲ. ಆಗಸ್ಟ್ 1ರಿಂದ 19ವರೆಗೆ 50 ಮಿಮೀ ಆಗಬೇಕಿದ್ದ ಮಳೆ 150 ಮಿಮೀ ಆಗಿದೆ. ಜೂನ್‌ದಿಂದ ಆಗಸ್ಟ್ 18ರವರೆಗೆ 200 ಮಿಮೀ ಆಗಬೇಕಿದ್ದ ಮಳೆ 300 ಮಿಮೀ ಆಗಿದೆ. ಒಟ್ಟಿನಲ್ಲಿ ಮುಂಗಾರು ವಾಡಿಕೆಗಿಂತ ಶೇ.50ರಷ್ಟು ಹೆಚ್ಚಾಗಿದ್ದರಿಂದ ವ್ಯತಿರಿಕ್ತ ಪರಿಣಾಮವಾಗಿದೆ.




> ಕೃಷಿ ಮತು ದಿನಗೂಲಿ ಕೆಲಸಗಳು ಸ್ಥಗಿತಗೊಂಡಿದ್ದರಿಂದ ದಿನದ ದುಡಿಮೆಯಿಂದಲೇ ಜೀವನ ನಡೆಸುವ ಕೃಷಿ ಕೂಲಿಕಾರರ ಬದುಕು ಚಿಂತಾಜನಕವಾಗಿದೆ. ಮಳೆ ಹೀಗೇಯೇ ಮುಂದುವರೆದರೆ ಹೊತ್ತಿನ ಊಟಕ್ಕೂ ಕಷ್ಟಪಡಬೇಕಾದ ಸ್ಥಿತಿ ನಿರ್ಮಾಣವಾಗಲಿದೆ. ಕೆಲಸವೂ ಇಲ್ಲ, ಕೂಲಿಯೂ ಇಲ್ಲದ್ದರಿಂದ ಹೊಟ್ಟೆಗೆ ತಣ್ಣೀರು ಬಟ್ಟೆಯೇ ಗತಿಯಾಗಿದೆ. ನಾಳೆ ಹೇಗೆ ಎಂಬ ಚಿಂತೆ ಕಾರ್ಮಿಕರನ್ನು ಕಾಡುತ್ತಿದ್ದು ಮಳೆರಾಯನ ಬಿಡುವಿಗೆ ಬೇಡುತ್ತಿದ್ದಾರೆ.

### ‘ಹಾಲತರ್ಿ ಅಂಗಳದಲ್ಲಿ ತಿಂಗಳ ಅರಿವಿನ ಬೆಳಕು’ ಕಾರ್ಯಕ್ರಮದಲ್ಲಿ ಚನ್ನವೀರ ಶ್ರೀಗಳು

# ಶರಣರ ವಚನಗಳಿಂದ ಜೀವನ ಸಾರ್ಥಕ

**■ವಿಜಯಸಾಕ್ಷಿ ಸುದ್ದಿ, ಹರಪನಹಳ್ಳಿ**

ಪ್ರಾಣಿ-ಪಕ್ಷಿ ಜೀವ ಸಂಕುಲದಿಂದ ಮಾನವ ಕಲಿಯಬೇಕಾದ್ದು ಬಹಳಷ್ಟಿದೆ. ಪಕ್ಷಿಗಳಿಗೆ ಅರಳಿ ಮರವೇ ಪ್ರಪಂಚವಾಗಿದೆ. ಅದರಂತೆ ಮಾನವನಿಗೆ ಭೂಮಂಡಲವು ಅರಳಿ ಮರವಿದ್ದಂತೆ ಎಂದು ಲಿಂಗನಾಯಕನಹಳ್ಳಿ ಚನ್ನವೀರ ಸ್ವಾಮಿಗಳು ತಿಳಿಸಿದರು.

ಹರಪನಹಳ್ಳಿ ಪಟ್ಟಣದ ಹೊರವಲಯದಲ್ಲಿರುವ ಹಾಲವರ್ತಿ ಮಠದಲ್ಲಿ ಸೋಮವಾರ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ತಾಲೂಕು ಘಟಕದ ವತಿಯಿಂದ ನಡೆದ ‘ಹಾಲತರ್ಿ ಅಂಗಳದಲ್ಲಿ ತಿಂಗಳ ಅರಿವಿನ ಬೆಳಕು’ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಆಸೆ, ಕಾಮ, ಕ್ರೋಧಗಳಿಗೆ ಯಾವುದೇ ಅಡ್ಡಿ ಆತಂಕಗಳಿಲ್ಲ. ಶರಣರು ನೀಡಿ ಹೋಗಿರುವ ವಚನಗಳನ್ನು ನಾವು ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ಜೀವನ ಸಾರ್ಥಕವಾಗುತ್ತದೆ. ದೇಹದಲ್ಲಿನ ಪ್ರತಿ ಕಣಕಣದಲ್ಲಿಯೂ ದೇವರಿದ್ದಾನೆ, ಮಾತುಗಳು ಮತ್ತೊಬ್ಬರಿಗೆ ಮಧುರ ಹಾಗೂ ತೃಪ್ತಿದಾಯಕವಾಗಿರಬೇಕು. ಸಮುದ್ರ ನೀರು ಉಪಯೋಗಕ್ಕೆ ಬರುವುದಿಲ್ಲ. ಆದರೆ ಕಿರಿದಾದ ಬಾವಿಯ ನೀರು ಕುಡಿಯಲು ಯೋಗ್ಯವಾಗಿರುತ್ತದೆ. ಆದ್ದರಿಂದ ಯಾವುದೇ ಮನುಷ್ಯನ ಮುಖಚರ್ಯೆ ನೋಡಿ ಅಳೆಯುವ ಮುನ್ನ ಅವನ ಅಂತರಾಳವನ್ನು ಅರಿಯಬೇಕು ಎಂದರು.

ಗುಲ್ಬರ್ಗ ವಿಶ್ವವಿದ್ಯಾಲಯದ ನಿವೃತ್ತ ಕುಲಸಚಿವ ಹಾಗೂ ಸಂಶೋಧಕ ಬಿ.ಸಿ. ಮಹಾಬಲೇಶ್ ಉಪನ್ಯಾಸ ನೀಡಿ, ವಚನ ಸಾಹಿತ್ಯವು ಸಮುದ್ರವಿದ್ದಂತೆ. ಅದರ ಆಳಕ್ಕೆ ಇಳಿದಾಗ ಮಾತ್ರ ಅದರ ರುಚಿ ಫಲಿಸುತ್ತದೆ. ವಚನಗಳು ವಿಶಿಷ್ಟ ಸ್ಥಾನಮಾನ ಹೊಂದಿವೆ. ಪಂಚಾಕ್ಷರಿ ಮಂತ್ರ ಪಠಿಸಿದರೆ ಆತ್ಮ ಶುದ್ಧಿಯಾಗುತ್ತದೆ ಎಂದರು.

ನಾಟಕ ರಚನಕಾರ ಎಚ್.ಎನ್. ಕೊಟ್ರಪ್ಪ, ನೀಲಗುಂದ ಗುಡ್ಡದ ವಿರಕ್ತಮಠದ ಚನ್ನಬಸವ ಶಿವಯೋಗಿ ಸ್ವಾಮೀಜಿ ಮಾತನಾಡಿದರು. ಎಚ್.ಎಸ್. ವಿಠೋಭ ಶಿಕ್ಷಕರು, ಕದಳಿ ವೇದಿಕೆ ತಾಲೂಕು ಅಧ್ಯಕ್ಷೆ ಬಿ.ಜಿ. ಜಯಶ್ರೀ, ಕೆ.ಎಂ. ಗುರುಸಿದ್ದಯ್ಯ, ಸಾಹಿತಿ ಬಣಕಾರ್ ರಾಜಶೇಖರ್ ಬಾಗಳಿ, ನಿವೃತ್ತ ಮುಖ್ಯ ಶಿಕ್ಷಕ ಬಾಗಳಿ ವಿ.ಬಿ. ಮಲ್ಲೇಶ್, ಬಣಕಾರ್ ಮಂಜಣ್ಣ, ಶ್ವೇತಾ, ಡಾ. ಎ.ಕೆ. ಸಂತೋಷ್, ಎಸ್. ವೀರಣ್ಣ, ಎಸ್.ಬಿ. ಪಾಟೀಲ್, ಪಿ. ಜಗದೀಶ್, ಚನ್ನಬಸವನಗೌಡ, ಚನ್ನಪ್ಪ, ಜಿ. ಬಸವರಾಜ್, ಎ.ಕೆ. ಸಾವಿತ್ರಮ್ಮ, ನೇತ್ರಮ್ಮ, ಅನುಪಮಾ ಗುರುಸಿದ್ದಯ್ಯ, ಸಿ.ಎಂ. ಲತಾ ಮುಂತಾದವರಿದ್ದರು.



## ಕೋಡಿಕೊಪ್ಪದ ಪ್ರಾಥಮಿಕ ಶಾಲೆಯಲ್ಲಿ ಗುರುವಂದನೆ



**■ವಿಜಯಸಾಕ್ಷಿ ಸುದ್ದಿ, ನರೇಗಲ್ಲ**

ಪಟ್ಟಣದ ಕೋಡಿಕೊಪ್ಪದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 2007-08ರಲ್ಲಿ ಕಲಿತ ವಿದ್ಯಾರ್ಥಿಗಳಿಂದ ಗುರುವಂದನೆ ಮತ್ತು ಸ್ನೇಹ ಸಮ್ಮೇಲನ ಕಾರ್ಯಕ್ರಮ ಜರುಗಿತು.

ಶಿಕ್ಷಕ ವಿ.ವಿ. ಅಣ್ಣಿಗೇರಿ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ, ಶೈಕ್ಷಣಿಕ ಹಂತದಲ್ಲಿ ಮಕ್ಕಳಿಗೆ ನೈತಿಕ, ಮೌಲ್ಯಯುತ ಶಿಕ್ಷಣ ನೀಡಿ ಮಕ್ಕಳನ್ನು ಸಂಸ್ಕಾರಯುತ ಜೀವನದತ್ತ ಕೊಂಡೊಯ್ಯುವ ಗುರುತರ ಜವಾಬ್ದಾರಿ ಶಿಕ್ಷಕರ ಮೇಲಿದೆ. ಅಕ್ಷರಾಭ್ಯಾಸದ ಗುರು ಪರಂಪರೆಯಲ್ಲಿ ಶ್ರದ್ಧೆಯಿಂದ ಕಲಿತು ಇಂದಿಗೂ ಕಲಿಸಿದ ಗುರುಗಳು, ಗುರುಮಾತೆಯರನ್ನು ಸ್ಮರಿಸಿ ಅವರಿಗೆ ಗುರುವಂದನೆ ಸಲ್ಲಿಸುತ್ತಿರುವುದು ಶ್ಲಾಘನೀಯ ಎಂದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಇನ್ನೊರ್ವ ಶಿಕ್ಷಕ ಎಮ್.ಎಸ್. ಪಾಟೀಲ, ಈ ವಿದ್ಯಾರ್ಥಿಗಳು ನೆರವೇರಿಸುತ್ತಿರುವ ಗುರುವಂದನಾ ಕಾರ್ಯಕ್ರಮ ನಿಜಕ್ಕೂ ಅರ್ಥಪೂರ್ಣ. ಕಲಿತ ವಿದ್ಯಾ ಮಂದಿರ, ಕಲಿಸಿದ ಗುರುಗಳನ್ನು ಮರೆಯದೆ ಅವರು ಇಂತಹ ಅಭೂತಪೂರ್ವ ಕಾರ್ಯ ನೆರವೇರಿಸಿದ್ದಕ್ಕಾಗಿ ಅವರೆಲ್ಲರೂ ಅಭಿನಂದನಾರ್ಹರು ಎಂದರು.

2007-08ರ ವಿದ್ಯಾರ್ಥಿ ನಾಗನಗೌಡ ನಾಡಗೌಡ್ರ ಮಾತನಾಡಿ, ನಮ್ಮನ್ನು ಹೆತ್ತವರು ನಮ್ಮ ತಂದೆ-ತಾಯಿಗಳು. ಆದರೆ ನಮಗೆ ಶಿಕ್ಷಣವನ್ನು ನೀಡಿ, ತಮ್ಮ ಮಕ್ಕಳಂತೆ ನಮ್ಮನ್ನು ಕಂಡು ನಮಗೆ ಬದುಕಿನ ಪಾಠ ಹೇಳಿಕೊಡುವ ಪ್ರತಿ ಗುರುವೂ ನಮಗೆ ಎರಡನೇ ತಂದೆ-ತಾಯಿ ಇದ್ದಂತೆ. ಅವರ ಪೂಜೆಯನ್ನು ಗುರುವಂದನೆಯ ಮೂಲಕ ಮಾಡುತ್ತಿರುವ ನಾವು ನಿಜಕ್ಕೂ ಧನ್ಯರು ಎಂದರು.

ಅತಿಥಿಗಳಾಗಿ ನಿವೃತ್ತ ಶಿಕ್ಷಕಿ ಎ.ಐ ರಾಂಪೂರ, ಎಸ್.ಬಿ. ಕೊಟ್ಟೂರಶೆಟ್ಟರ, ಎ.ಜಿ. ಕಂದಾರಿ ಪಾಲ್ಗೊಂಡಿದ್ದರು. ಮುಖ್ಯೋಪಾಧ್ಯಾಯ ಸಂಗಯ್ಯ ಪ್ರಭುಸ್ವಾಮಿಮಠ ಅಧ್ಯಕ್ಷತೆ ವಹಿಸಿದ್ದರು. ಹಿಂದಿನ ವಿದ್ಯಾರ್ಥಿಗಳಾದ ಭೀಮಸಿ ಕುರಿ, ಮಂಜುನಾಥ ಚಿಕ್ಕೊಪ್ಪದ, ಹುಚ್ಚೀರೇಶ ಕುಂಬಾರ, ಅಶ್ವಿನಿ ಹೆಗಡೆ, ರಾಜೇಶ್ವರಿ ಜೂಚನಿ, ಅನಿತಾ ಅರಹುಣಸಿ, ಲಕ್ಷ್ಮೀ ರಾಠೋಡ, ಹುಸೇನಬಿ ನಿಶಾನದಾರ, ವಿಜಯಲಕ್ಷ್ಮೀ ಅಣ್ಣಿಗೇರಿಮಠ, ಉಮೇಶ ಕುಂಬಾರ, ಸಂಗೀತಾ ಹಿರೇಮಠ, ಹನಮಂತ ನವಲಗುಂದ, ಕಲ್ಲಯ್ಯ ಗುರುವಡೆಯರ ಹಾಗೂ ಜೀವನಸಾಬ ಅಮರಗೋಳ ಉಪಸ್ಥಿತರಿದ್ದರು. ಸಂತೋಷ ಉದ್ದಣ್ಣವರ ಸ್ವಾಗತಿಸಿದರು. ಕಳಕಪ್ಪ ಹಳ್ಳಿಕೇರಿ ನಿರೂಪಿಸಿದರು. ದೇವರಾಜ ಗಡಗಿ ವಂದಿಸಿದರು.

# ಧಾರ್ಮಿಕ ಕಾರ್ಯಗಳಿಂದ ಉತ್ತಮ ಸಂದೇಶ

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ನಿತ್ಯದ ಬದುಕಿನ ಜಂಜಾಟಗಳ ನಡುವೆಯೂ ಶ್ರಾವಣ ಮಾಸದಲ್ಲಿ ಮನಸ್ಸಿನ ಶಾಂತಿ ಮತ್ತು ನೆಮ್ಮದಿಗಾಗಿ ಪುಣ್ಯ ಪುರುಷರ ಪುರಾಣ ಪುಣ್ಯಕಥೆಗಳನ್ನು ಆಲಿಸುವದು, ಧಾರ್ಮಿಕ ಕಾರ್ಯಗಳನ್ನು ಕೈಗೊಳ್ಳುವದು ಸಮಾಜಕ್ಕೆ ಒಳ್ಳೆಯ ಸಂದೇಶ ನೀಡುತ್ತವೆ ಎಂದು ಗಂಜಿಗಟ್ಟಿ ಚರಮೂರ್ತೇಶ್ವರಮಠದ ಡಾ.ವೈಜನಾಥ ಶಿವಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ನುಡಿದರು.

ಅವರು ಶ್ರಾವಣ ಮಾಸದ ಕಡೆಯ ಸೋಮವಾರ ಮಹೇಶ ಹೊಗೆಸೊಪ್ಪಿನ ಅವರ ನೇತೃತ್ವದ ಭಕ್ತವೃಂದದವರು ಹಮ್ಮಿಕೊಂಡಿದ್ದ ಗುರುಭಕ್ತಿ ಶ್ರಾವಣದ ನಿಮಿತ್ತ ಗಂಜಿಗಟ್ಟಿ ಶ್ರೀಗಳ ತುಲಾಭಾರ, ಗೋಪೂಜೆ, ತಾಯಂದಿರ ಉಡಿ ತುಂಬುವ ಹಾಗೂ ಪ್ರತಿಭಾವಂತರಿಗೆ, ಸಾಧಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ತುಲಭಾರ ಸೇವೆಯನ್ನು ಸ್ವೀಕರಿಸಿ ಆಶೀರ್ವಚನ ನೀಡಿ ಮಾತನಾಡಿದರು.



ಕಾರ್ಯಕ್ರಮ ಉದ್ಘಾಟಿಸಿದ ಮಾಜಿ ಶಾಸಕ ಜಿ.ಎಸ್. ಗಡ್ಡದೇವರಮಠ, ವರ್ತಕ ಬಸವೇಶ ಮಹಾಂತಶೆಟ್ಟರ ಮಾತನಾಡಿ, ಅನೇಕ ಧಾರ್ಮಿಕ ಕಾರ್ಯಗಳಲ್ಲಿ ಮುಖ್ಯವಾಗಿ ಗೋಮಾತೆಯನ್ನು ಪೂಜಿಸುವ ಸಂಪ್ರದಾಯ ನಮ್ಮಲ್ಲಿದೆ, ಸಹಸ್ರಾರು ದೇವರುಗಳ ಸಂಗಮವಾಗಿರುವ ಮಹತ್ವದ ಗೋವುಗಳನ್ನು ಪೂಜಿಸುವದರಿಂದ ಮನಸ್ಸಿಗೆ ನೆಮ್ಮದಿಯ ಜೊತೆ-ಗೆ ಪುಣ್ಯ ಪ್ರಾಪ್ತಿಯಾಗುತ್ತದೆ. ಗೋವಿಗೆ ದೇವಾನುದೇವತೆಗಳ ಕಾಲದಿಂದಲೂ ಶ್ರೇಷ್ಠ ಸ್ಥಾನವಿದೆ. ಅಲ್ಲದೆ ಗುರುವಿನ ತುಲಾಭಾರ ಮಾಡುವ ಶ್ರೇಷ್ಠ ಕಾರ್ಯವು ಇಲ್ಲಿ ನಡೆದಿರುವದು ಮಹತ್ವದ್ದಾಗಿದೆ. ಶ್ರಾವಣ ಮಾಸದ ಈ ಕಾರ್ಯಕ್ರಮ ನೆಮ್ಮದಿ ತರುವಂತಿದೆ ಎಂದು ಹೇಳಿದರು.

ಕಾರ್ಯಕ್ರಮದ ರೂವಾರಿ ಮಹೇಶ ಹೊಗೆಸೊಪ್ಪಿನ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಭೆಯಲ್ಲಿ ಮಾಜಿ ಶಾಸಕ ರಾಮಣ್ಣ ಲಮಾಣಿ ಮಾತನಾಡಿದರು. ವೇದಿಕೆಯಲ್ಲಿ ಪುರಸಭೆ ಅಧ್ಯಕ್ಷೆ ಯಲ್ಲಮ್ಮ ದುರಗಣ್ಣವರ, ಶರಣಬಸಪ್ಪ ಗುಡಿಮನಿ, ಹನುಮಂತಪ್ಪ ಅಬ್ಬಿಗೇರಿ, ಬಸಣ್ಣ ಬೆಟಗೇರಿ, ಚನ್ನಬಸಪ್ಪ ಲಿಂಗಶೆಟ್ಟಿ, ಚಂಬಣ್ಣ ಬಾಳಿಕಾಯಿ, ಗುರುನಾಥ ದಾನಪ್ಪನವರ, ದೊಡ್ಡೀರಪ್ಪ ಬನ್ನಿಕೊಪ್ಪ, ಸೋಮಣ್ಣ ಡಾಣಗಲ್, ಬಸಣ್ಣ ಬೆಂಡಿಗೇರಿ, ರಾಜಣ್ಣ ಕುಂಬಿ, ಮಂಜುನಾಥ ಮಾಗಡಿ, ಬಸಣ್ಣ ಓದುನವರ, ವಿಜಯಕುಮಾರ ಹತ್ತಿಕಾಳ, ಶಕುಂತಲಾ ಬಸೆಟ್ಟೆಪ್ಪ ಹೊಗೆಸೊಪ್ಪಿನ್, ಬಸವರಾಜ ಹೊಗೆಸೊಪ್ಪಿನ ಮುಂತಾದವರಿದ್ದರು. ನಾಗರಾಜ ಪೂಜಾರ, ಕಿರಣ ನವಲೆ, ಬಸವರಾಜ ಬಾಳೇಶ್ವರಮಠ ನಿರೂಪಿಸಿದರು.

ನಿರಂತರ ಮಳೆ । ನೆಲ ಕಚ್ಚಿದ ರೈತರ ನೆಚ್ಚಿನ ಬೆಳೆ ಹೆಸರು ಗಿಡಲ್ಲಿಯೇ ಮೊಳಕೆ

# ರೈತರ ಬಾಳಿಗೆ ಶಾಪವಾದ ಮಳೆ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಕಳೆದೆರಡು ವಾರದಿಂದ ಸುರಿಯುತ್ತಿರುವ ಜಡಿ ಮಳೆಗೆ ಮುಂಗಾರಿನ ಬೆಳೆಗಳು ಮಣ್ಣು ಪಾಲಾಗುತ್ತಿವೆ. ಮುಖ್ಯವಾಗಿ ಕಟಾವಿನ ಹಂತದಲ್ಲಿರುವ ಹೆಸರು ಬೆಳೆ ಗಿಡದಲ್ಲಿಯೇ ಮೊಳಕೆಯೊಡೆದು ಹಾಳಾಗುತ್ತಿದೆ. ಮುಂಗಾರಿನ ಬಹುತೇಕ ಬೆಳೆಗಳು ವಿಪರೀತ ಮಳೆಯಿಂದ ಹಾನಿಗೀಡಾಗಿ ಕೈಗೆ ಬಂದ ತುತ್ತು ಬಾಯಿಗೆ ಬರದಂತಹ ಸ್ಥಿತಿ ನಿರ್ಮಾಣವಾಗಿದೆ. ರೈತರ ಪಾಲಿಗೆ ವರವಾಗಬೇಕಿದ್ದ ಮಳೆ ಶಾಪವಾಗಿ ಪರಿಣಮಿಸಿದೆ.

ಮೇ ಅಂತ್ಯ ಮತ್ತು ಜೂನ್ ಮೊದಲ ವಾರದಲ್ಲಿಯೇ ಬಿತ್ತನೆ ಮಾಡಿರುವ ಬೆಳೆಗೀಗ 80-90 ದಿನಗಳ ಕಾಲಾವಧಿ. ಜಿಟಿಜಿಟಿ ಮಳೆ, ಮೋಡ ಕವಿದ ವಾತಾವರಣದಿಂದ ಹೆಸರು ಬೆಳೆಗೆ ರೋಗಬಾಧೆ ತಗುಲಿ ಇಳುವರಿ ಮೊದಲೇ ಕುಂಠಿತವಾಗಿತ್ತು. ಖರ್ಚು ಮಾಡಿದಷ್ಟಾದರೂ ಬೆಳೆ ಬಂದರೆ ಸಾಕು ಎಂದಿದ್ದರು. ಇದೀಗ ಗಿಡದಲ್ಲಿ ಒಣಗಿರುವ ಕಾಯಿಯಲ್ಲಿನ ಕಾಳು ಮೊಳಕೆಯೊಡೆದು ಹಾಳಾಗುತ್ತಿದೆ. ರೈತನ ಪಾಲಿನ ಬೆಳೆ ಮತ್ತೆ ಭೂಮಿ ಪಾಲಾಗುತ್ತಿದೆ. ಈ ವರ್ಷ ಸರ್ಕಾರ ಪ್ರತಿ ಕ್ವಿಂಟಲ್ ಹೆಸರಿಗೆ 8768 ರೂ ಬೆಂಬಲ ಬೆಲೆ ಘೋಷಣೆ ಮಾಡಿದ್ದಲ್ಲದೇ ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ಇದ್ದರೂ ಬೆಳೆ ಮಾತ್ರ ಮಳೆ ನುಂಗಿದೆ.

ತಾಲೂಕಿನಲ್ಲಿ ಲಕ್ಷ್ಮೇಶ್ವರ ಸೇರಿ ದೊಡ್ಡೂರ, ಶಿಗ್ಲಿ, ಅಡರಕಟ್ಟಿ, ಗೊಜನೂರ, ಯತ್ತಿನಹಳ್ಳಿ, ಯಳವತ್ತಿ, ಮಾಡಳ್ಳಿ, ಹರದಗಟ್ಟಿ, ಆದ್ರಳ್ಳಿ, ಅಕ್ಕಿಗುಂದ, ಸೂರಣಗಿ, ಬಾಲೆಹೊಸೂರ, ರಾಮಗೇರಿ, ಬಸಾಪುರ, ಒಡೆಯರ ಮಲ್ಲಾಪುರ, ಗೋನಾಳ ಸೇರಿ ಈ ವರ್ಷ 5200 ಹೆಕ್ಟೇರ್ ಪ್ರದೇಶದಲ್ಲಿ ಹೆಸರು ಬಿತ್ತನೆ ಗುರಿ ಹೊಂದಲಾಗಿತ್ತು. ಆದರೆ ಗುರಿ ಮೀರಿ 5850 ಹೆಕ್ಟೇರ್ ಗುರಿ ಮೀರಿ ಬಿತ್ತನೆ ಮಾಡಲಾಗಿದೆ. 20 ದಿನಗಳಿಂದ ಜಮೀನಿನಲ್ಲಿ ಕೆಲಸ ಮಾಡಲು ಸಾಧ್ಯವಾಗದೇ ಕಸ ಬೆಳೆದು ಜಮೀನುಗಳು ಸಂಪೂರ್ಣ ಹಾಳಾಗುವ ಸ್ಥಿತಿಗೆ ತಲುಪಿವೆ. ಹೆಸರು ಬೆಳೆಯಷ್ಟೇ ಅಲ್ಲದೆ ಶೇಂಗಾ, ಹತ್ತಿ, ಉಳ್ಳಾಗಡ್ಡಿ, ಮೆಕ್ಕೆಜೋಳ, ಮೆಣಸಿನಕಾಯಿ ಬೆಳೆಗಳೂ ಹಾಳಾಗಿ ಸಂಪೂರ್ಣ ಕೈಕೊಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಈ ಕುರಿತು ಹೆಸರು ಬೆಳೆಗಾರರಾದ ಸೋಮನಗೌಡ ಪಾಟೀಲ, ರಾಜಣ್ಣ ಹವಳದ, ಈರಣ್ಣ ಆದಿ, ಬಸವರಾಜ ಮೆಣಸಿನಕಾಯಿ, ಚನ್ನಪ್ಪ ಷಣ್ಮುಕಿ ಸೇರಿದಂತೆ ಹಲವು ರೈತರು ಜಮೀನಿನಲ್ಲಿ ಹಾನಿಗೀಡಾದ ಹೆಸರು ಬೆಳೆಯಿಂದ ಮನನೊಂದು ತಮ್ಮ ಅಳಲನ್ನು ತೋಡಿಕೊಂಡರು. ಸಕಾಲಿಕ ಮಳೆಯಿಂದ ಈ ವರ್ಷ ಮುಂಗಾರಿನ ಬೆಳೆಗಳು ಸಮೃದ್ಧವಾಗಿಯೇ ಬೆಳೆದಿದ್ದವು. ಬೆಳೆ ಕಂಡು ಈ ವರ್ಷವಾದರೂ ಬದುಕು ಹಸನಾದೀತು ಎಂದು ನಂಬಿ ಪ್ರತಿ ಎಕರೆ ಹೆಸರು ಬಿತ್ತನೆಗೆ ಎಲ್ಲಾ ಖರ್ಚು ಸೇರಿ ಕನಿಷ್ಠ 20 ಸಾವಿರ ರೂ ಖರ್ಚು ಮಾಡಿದ್ದೆವು. ಆದರೆ ಈಗ ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿ ಭೂಮಿ ಪಾಲಾಗಿದೆ. ಹೀಗಾದರೆ ನಾವು ಹೇಗೆ ಬದುಕಬೇಕು ಎಂಬುದು ತಿಳಿಯದಂತಾಗಿದೆ. ಸರ್ಕಾರ ಅತಿವೃಷ್ಟಿ ಪರಿಹಾರ ಯೋಜನೆಯಡಿ ಹೆಸರು ಸೇರಿ ಮುಂಗಾರಿನಲ್ಲಿ ಹಾನಿಗೀಡಾದ ಎಲ್ಲ ಬೆಳೆಗಳಿಗೆ ಪ್ರತಿ ಎಕರೆಗೆ ಕನಿಷ್ಠ 20 ಸಾವಿರ ರೂ ಬೆಳೆಹಾನಿ ಪರಿಹಾರ, ಬೆಳೆವಿಮೆ ನೀಡಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಯಂತ್ರದ ಮೂಲಕ ಕಟಾವಿಗೆ ಅನುಕೂಲವಾಗಲಿ ಎಂದು ರಾಸಾಯನಿಕ ಸಿಂಪಡಣೆ ಮಾಡಿ ಬೆಳೆ ಒಣಗಿಸಿದ್ದಾರೆ. ಆದರೆ ಕಟಾವಿಗೆ ಬಂದ ಬೆಳೆಯನ್ನು ಮಷಿನ್ ಕಟಾವು ಮಾಡಲು ಮತ್ತು ಕೂಲಿ ಆಳಿಂದ ಬಿಡಿಸಿ ತರಲೂ ಮಳೆ ಬಿಡುವು ಕೊಡುತ್ತಿಲ್ಲ. ಇದರಿಂದ ಹೆಸರು ಗಿಡದಲ್ಲಿಯೇ ಮೊಳಕೆ ಬಂದು ಹಾಳಾಗುತ್ತಿರುವುದನ್ನು ಕಂಡು ರೈತ ಸಂಕಟಪಡುತ್ತಾ ಕೈಚೆಲ್ಲಿ ಕುಳಿತುಕೊಳ್ಳುವಂತಾಗಿದೆ.



ತುಂತುರು ಮಳೆ, ಮೋಡಕವಿದ ವಾತಾವರಣದಿಂದ, ರೋಗಬಾಧೆಯಿಂದ ಇಳುವರಿ ಕುಂಠಿತವಾಗಿದೆ. ಸತತ ಮಳೆಯಿಂದ ಕಟಾವು ಮಾಡಲಾಗದೇ ಅವಧಿ ಮೀರಿ ಹೆಸರು ಬೆಳೆ ಗಿಡದಲ್ಲೇ ಹಾಳಾಗುತ್ತಿದೆ. ಬೆಳೆಹಾನಿ ಸ್ಥಿತಿಯ ಬಗ್ಗೆ ಹಿರಿಯ ಅಧಿಕಾರಿಗಳ ಗಮನಕ್ಕೆ ತರಲಾಗುವುದು.

**– ಚಂದ್ರಶೇಖರ ನರಸಮ್ಮನವರ.**
**ಸಹಾಯಕ ಕೃಷಿ ಅಧಿಕಾರಿ.**

---

**ಕರ್ನಾಟಕ ಸರ್ಕಾರ**
**ಜಿಲ್ಲಾ ಪಂಚಾಯತ ಗದಗ**
**ತಾಲೂಕ ಪಂಚಾಯತ ರೋಣ**

## ಗ್ರಾಮ ಪಂಚಾಯತ ಕಾರ್ಯಾಲಯ, ಯಾವಗಲ್ಲ

ತಾಲೂಕ :– ರೋಣ | ಜಿಲ್ಲಾ:– ಗದಗ
ಕ್ರ.ಸಂ:ಗ್ರಾ.ಪಂ./ಯಾವಗಲ್ಲ/ನರೇಗಾ/ದ.ಪ.ಪ್ರ/2025–26 | ದಿನಾಂಕ:19–08–2025

## ದರಪಟ್ಟಿ ಪ್ರಕಟಣೆ

2025–2026ನೇ ಸಾಲಿನ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಅನುಷ್ಠಾನಗೊಳ್ಳುವ ಈ ಕೆಳಕಂಡ ಕಾಮಗಾರಿಗಳಿಗೆ ವಿವಿಧ ರೀತಿಯ ಸಾಮಗ್ರಿಗಳನ್ನು ಸಂಗ್ರಹಿಸುವ ಸಂಬಂಧ ದರಪಟ್ಟಿ ಆಹ್ವಾನಿಸಲಾಗಿದೆ. ಇದರ ಪ್ರಯುಕ್ತ ಜಿಲ್ಲಾ ಡಿ.ಪಿ.ಸಿ ಲಾಗಿನನಲ್ಲಿ ನೋಂದಾಯಿತ ಆಸಕ್ತ ಸರಬರಾಜುದಾರರು ದರಪಟ್ಟಿಯನ್ನು ಸಲ್ಲಿಸಬಹುದಾಗಿದ್ದು ವಿವರ ಮತ್ತು ವೇಳಾಪಟ್ಟಿ ಈ ಕೆಳಗಿನಂತಿವೆ.

| ಕ್ರ.ಸಂ | ಕಾಮಗಾರಿಯ ಹೆಸರುಗಳು | ಅಂದಾಜು ಮೊತ್ತ ( ಲಕ್ಷಗಳಲ್ಲಿ) | ಸಾಮಗ್ರಿ ಮೊತ್ತ ( ಲಕ್ಷಗಳಲ್ಲಿ) |
|---|---|---|---|
| 01 | ಯಾವಗಲ್ಲ ಗ್ರಾಮದ ಯಾವಗಲ್ಲ ಇವರ ಮನೆಯಿಂದ ಗೌಸುಸಾಬ ಇವರ ಮನೆಯವರೆಗೆ ಸಿಸಿ ರಸ್ತೆ ನಿರ್ಮಾಣ | 4.0 | 3.20 |
| 02 | ಯಾವಗಲ್ಲ ಗ್ರಾಮದ ನರಗುಂದ ರಸ್ತೆ ಇಂದ ಕುಡಿಯುವ ನೀರಿನ ಕೆರೆಯ ಕೋಡಿಯವರೆಗೆ ರಸ್ತೆ ಅಭಿವೃದ್ದಿಪಡಿಸುವುದು | 1.40 | 0.35 |
| 03 | ಯಾವಗಲ್ಲ ಗ್ರಾಮದ ಕನ್ನಡ ಗಂಡು ಮಕ್ಕಳ ಶಾಲೆಯಿಂದ ಗೌಡ್ರ ಹಿತ್ತಲದವರೆಗೆ ರಸ್ತೆ ಅಭಿವೃದ್ದಿಪಡಿಸುವುದು | 0.79 | 0.19 |
| 04 | ಯಾವಗಲ್ಲ ಗ್ರಾಮದ ಬಸಪ್ಪ ಜಕ್ಕಲಿ ಇವರ ಮನೆಯಿಂದ ಮುಸ್ತಪ್ಪನವರ ಮನೆಯವರೆಗೆ ರಸ್ತೆ ಅಭಿವೃದ್ದಿಪಡಿಸುವುದು | 3.20 | 0.80 |
| 05 | ಯಾವಗಲ್ಲ ಗ್ರಾಮದ ಬಾಪೂಗೌಡ ಶಂ ಪೋಲೀಸಪಾಟೀಲ ಇವರ ಹೊಲದ ಹತ್ತಿರ ಇರುವ ಸರುವಿಗೆ ಸಿಡಿ ನಿರ್ಮಾಣ | 0.79 | 0.59 |
| 06 | ಯಾವಗಲ್ಲ ಗ್ರಾಮದ ಶಿದ್ದಯ್ಯ ಗುಡ್ಡಿಮಠ ಇವರ ಹೊಲದ ಹತ್ತಿರ ಇರುವ ಸರುವಿಗೆ ಸಿಡಿ ನಿರ್ಮಾಣ | 1.59 | 1.19 |
| 07 | ಯಾವಗಲ್ಲ ಗ್ರಾಮದ ಅಂದಪ್ಪ ಸವದತ್ತಿ ಇವರ ಹೊಲದ ಹತ್ತಿರ ಇರುವ ಸರುವಿಗೆ ಸಿಡಿ ನಿರ್ಮಾಣ | 1.59 | 1.19 |
| 08 | ಯಾವಗಲ್ಲ ಗ್ರಾಮದ ಸೋಮವ್ವ ಪಾಟೀಲ ಇವರ ಹೊಲದ ಹತ್ತಿರ ಇರುವ ಸರುವಿಗೆ ಸಿಡಿ ನಿರ್ಮಾಣ | 1.0 | 0.75 |
| 09 | ಯಾ.ಸ.ಹಡಗಲಿ ಗ್ರಾಮದ ನವ ಗ್ರಾಮದ ಪಿಂಜಾರ ಮನೆಯಿಂದ ವಾಸನದ ಮನೆಯವೆಗೆ ಸಿಸಿ ರಸ್ತೆ ನಿರ್ಮಾಣ | 2.39 | 1.91 |
| 10 | ಯಾ.ಸ.ಹಡಗಲಿ ಗ್ರಾಮದ ಶಿವು ಬೋಪಳಾಪೂರ ಇವರ ಹೊಲದ ಹತ್ತಿರ ಇರುವ ಸರುವಿಗೆ ಸಿಡಿ ನಿರ್ಮಾಣ | 0.79 | 0.59 |
| 11 | ಯಾ.ಸ.ಹಡಗಲಿ ಗ್ರಾಮದ ನವ ಗ್ರಾಮದ ಮಡ್ಲಿ ಇವರ ಮನೆಯಿಂದ ಮಡಿವಾಳರ ಮನೆಯವರೆಗೆ ರಸ್ತೆ ಅಭಿವೃದ್ದಿಪಡಿಸುವುದು | 1.60 | 0.40 |

1) ದರಪಟ್ಟಿ ಅವಧಿ 20–08–2025 ರಿಂದ 29–08–2025 ರವರೆಗೆ
2) ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸುವ ಕೊನೆಯ ದಿನಾಂಕ 29–08–2025 ಮಧ್ಯಾಹ್ನ 12.30 ಘಂಟೆಯವರೆಗೆ.
3) ದರಪಟ್ಟಿ ತೆರೆಯುವ ದಿನಾಂಕ 29–08–2025 ಮಧ್ಯಾಹ್ನ 12.30 ಘಂಟೆ ನಂತರ.
4) ಅರ್ಜಿ ಸಲ್ಲಿಸುವ ಆಸಕ್ತ ನೋಂದಾಯಿತರು ಪ್ರತ್ಯೇಕವಾಗಿ ದರಪಟ್ಟಿಗಳನ್ನು ಸಲ್ಲಿಸತಕ್ಕದ್ದು.
5) ಜಿ,ಪಂ. ಡಿ.ಪಿ.ಸಿಲಾಗಿನನಲ್ಲಿ ನೋಂದಾಯಿಸಿದ ಸರಬರಾಜುದಾರರು ಮಾತ್ರ ದರಪಟ್ಟಿಯನ್ನು ಸಲ್ಲಿಸಬಹುದು.
6) ಷರತ್ತುಗಳು ಹಾಗೂ ಸಾಮಗ್ರಿ ವಿವರ ಮತ್ತು ಇತರೆ ವಿಷಯಗಳು ಮಾಹಿತಿಗಾಗಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಗ್ರಾಮ ಪಂಚಾಯತ ಕಾರ್ಯಾಲಯ ಇವರನ್ನು ಕಛೇರಿ ಸಮಯದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ಸಹಿ ಆಗಿದೆ/–
**ಪಂಚಾಯತ ಅಭಿವೃದ್ಧಿ ಅಧಿಕಾರಿ,**
**ಗ್ರಾಮ ಪಂಚಾಯತ, ಯಾವಗಲ್ಲ**

ಸಹಿ ಆಗಿದೆ/–
**ಅಧ್ಯಕ್ಷರು,**
**ಗ್ರಾಮ ಪಂಚಾಯತ, ಯಾವಗಲ್ಲ**

---

**ಕರ್ನಾಟಕ ಸರ್ಕಾರ**
**ಜಿಲ್ಲಾ ಪಂಚಾಯತ ಗದಗ**
**ತಾಲೂಕ ಪಂಚಾಯತ ರೋಣ**

## ಗ್ರಾಮ ಪಂಚಾಯತ ಕಾರ್ಯಾಲಯ, ಸವಡಿ

ತಾಲೂಕ :– ರೋಣ | ಜಿಲ್ಲಾ:– ಗದಗ
ಕ್ರ.ಸಂ:ಗ್ರಾ.ಪಂ./ಸವಡಿ/ನರೇಗಾ/ದ.ಪ.ಪ್ರ/2025–26 | ದಿನಾಂಕ:19–08–2025

## ದರಪಟ್ಟಿ ಪ್ರಕಟಣೆ

2025–2026ನೇ ಸಾಲಿನ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಅನುಷ್ಠಾನಗೊಳ್ಳುವ ಈ ಕೆಳಕಂಡ ಕಾಮಗಾರಿಗಳಿಗೆ ವಿವಿಧ ರೀತಿಯ ಸಾಮಗ್ರಿಗಳನ್ನು ಸಂಗ್ರಹಿಸುವ ಸಂಬಂಧ ದರಪಟ್ಟಿ ಆಹ್ವಾನಿಸಲಾಗಿದೆ. ಇದರ ಪ್ರಯುಕ್ತ ಜಿಲ್ಲಾ ಡಿ.ಪಿ.ಸಿ ಲಾಗಿನನಲ್ಲಿ ನೋಂದಾಯಿತ ಆಸಕ್ತ ಸರಬರಾಜುದಾರರು ದರಪಟ್ಟಿಯನ್ನು ಸಲ್ಲಿಸಬಹುದಾಗಿದ್ದು ವಿವರ ಮತ್ತು ವೇಳಾಪಟ್ಟಿ ಈ ಕೆಳಗಿನಂತಿವೆ.

| ಕ್ರ ಸಂ. | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) | ಸಾಮಗ್ರಿ ಮೊತ್ತ |
|---|---|---|---|
| 01 | 1514004027-25-657 ಸವಡಿ ಗ್ರಾಮದ ಪ್ರವೀಣ ಗೇದಗೇರಿ ಅವರ ಹೂಲದದಿಂದ ಶರಣಯ್ಯ ಹಿರೇಮಠ ಅವರ ಹೂಲದವರೆಗೆ ಮೆಟಲಿಂಗ್ ರಸ್ತ | 3.5 | 199757 |
| 02 | 1514004027-25-671 ಸವಡಿ ಗ್ರಾಮದ ಶೇಖಪ್ಪ ತಹಶೀದ್ದಾರ್ಲ ಅವರ ಹೂಲದಿಂದ ಪ್ರವೀಣ ಗೇದಗೆರಿ ಅವರ ಹೂಲದವರಗೆ ಗಟಾರ ನಿರ್ಮಾಣ | 3.5 | 206950 |
| 03 | 1514004027-25-658 ಸವಡಿ ಗ್ರಾಮದ ಬಸವರಾಜ ಗಡಗಿ ಅವರ ಹೂಲದದಿಂದ ಯಸವಂತಗೌಡ ಅರಹುಣಸಿ ಅವರ ಹೂಲದವರೆಗೆ ಮೆಟಲಿಂಗ್ ರಸ್ತ | 1 | 77076 |
| 04 | 1514004027-25-659 ಸವಡಿ ಗ್ರಾಮದ 2ನೇ ವಾರ್ಡಿನ ಗಂಗಾಧರ ಅಂಗಡಿ ಇವರ ಮನೆಯಿಂದ ಬಸವರಾಜ ಅಂಗಡಿಯವರ ಮನೆಯವೆರೆಗ ಸಿ ಸಿ ರ | 2.1 | 137261 |
| 05 | 1514004027-25-660 ಸವಡಿ ಗ್ರಾಮದ ಗುರಪಾದಪ್ಪ ಕಂಠಿ ಅವರ ಹೂಲದಿಂದ ಅಸುಟ್ಟಿ ಮಾಸ್ತರ ಹೂಲದವರೆಗೆ ಮೆಟಲಿಂಗ್ ರಸ್ತೆ ನಿ | 2 | 155865 |
| 06 | 1514004027-25-661 ಸವಡಿ ಗ್ರಾಮದ ರಾಮಣ್ಣ ತೋಟದ ಇವರ ಮನೆಯಿಂದ ಈರಪ್ಪ ಹೊಸಳ್ಳಿ ಇವರ ಮನೆಯವರೆಗೆ ಸಿ ಸಿ ರಸ್ತೆ ನಿರ್ಮಾ | 2 | 135431 |
| 07 | 1514004027-25-662 ಸವಡಿ ಗ್ರಾಮದ 4ನೇ ವಾರ್ಡಿನ ಗದಗ ಮೇನ ಲೈನದಿಂದ ಶರಣಪ್ಪ ಪರಡ್ಡಿ ಇವರ ಮನೆಯವರೆಗೆ ಸಿ ಸಿ ರಸ್ತೆ ನಿ | 2 | 135431 |
| 08 | 1514004027-25-663 ಸವಡಿ ಗ್ರಾಮದ ಕಂಬಕ್ತದಾರಿಯ ಜೋಗರಡ್ಡಿ ಇವರ ಹೂಲದಿಂದ ಈರಪ್ಪ ಪವಾಡಶೇಟ್ಟಿ ಇವರ ಹೂಲದವರೆಗೆ ರಸ್ತೆ | 2 | 155865 |
| 09 | 1514004027-25-668 ಸವಡಿ ಗ್ರಾಮದ 6ನೇ ವಾರ್ಡಿನ ರುದ್ರಪ್ಪ ಸುರಕೊಡ ಇವರ ಮನೆಯಿಂದ ಬಸವರಾಜ ಕುಂಬಾರ ಇವರ ಮನೆಯವರೆಗೆ ಸಿ | 2 | 135431 |
| 10 | 1514004027-25-667 ಸವಡಿ ಗ್ರಾಮದ 6ನೇ ವಾರ್ಡಿನ ಸೋಮಪ್ಪ ಇವರ ಮನೆಯಿಂದ ರ್ಯಾವಪ್ಪ ಇವರ ಮನೆಯವರೆಗೆ ಸಿ ಸಿ ರಸ್ತೆ ನಿರ್ | 1 | 64055 |
| 11 | 1514004027-25-666 ಸವಡಿ ಗ್ರಾಮದ 6ನೇ ವಾರ್ಡಿನ ಕುಬೇರಪ್ಪ ಚಲವಾದಿ ಇವರ ಮನೆಯಿಂದ ಮಾರೇವ್ವ ಚಲವಾದಿ ಇವರ ಮನೆಯವರೆಗೆ ಸ | 1 | 64055 |
| 12 | 1514004027-25-665 ಸವಡಿ ಗ್ರಾಮದ ಕುಲಕರ್ಣಿಯವರ ಇವರ ಹೂಲದಿಂದ ಕೆಂಚಪ್ಪ ಯಲಿಗಾರ ಅವರ ಹೂಲದವರೆಗೆ ಮೆಟಲಿಂಗ್ ರಸ್ತೆ ನ | 2 | 155865 |
| 13 | 1514004027-25-664 ಸವಡಿ ಗ್ರಾಮದ ಮುತ್ತಪ್ಪ ಪರಡ್ಡಿ ಇವರ ಹೂಲದಿಂದ ಕುಲಕರ್ಣಿಯವರ ಹೂಲದವರೆಗೆ ಮೆಟಲಿಂಗ್ ರಸ್ತೆ ನಿರ್ | 2 | 155865 |
| 14 | 1514004027-25-678 ಸವಡಿ ಗ್ರಾಮದ ಕಂಬಕ್ತದಾರಿಯ ಮಹೇಶ ಮ್ಯಾಗೇರಿ ಇವರ ಹೂಲದ ಹತ್ತಿರ ಸಿ ಡಿ ನಿರ್ಮಾಣ CC deck slab/ | 1 | 57515 |
| 15 | 1514004027-25-677 ಸವಡಿ ಗ್ರಾಮದ 4ನೇ ವಾರ್ಡಿನ ಬಸಪ್ಪ ಗಡಗಿ ಇವರ ಮನೆಯಿಂದ ಚನ್ನಪ್ಪ ಗೊಜನೂರ ಮನೆಯವರೆಗೆ ಗಟಾರ ನಿರ್ಮ | 2 | 121063 |
| 16 | 1514004027-25-675 ಸವಡಿ ಗ್ರಾಮದ ರಾಮನಗೌಡ ಹೂಲದ ಹತ್ತಿರ ಸಿ ಡಿ ನಿರ್ಮಾಣ CC deck slab/ C D /ಮೋರಿ ನಿರ್ಮಾಣ | 1 | 57515 |
| 17 | 1514004027-25-674 ಸವಡಿ ಗ್ರಾಮದ ಹೊನ್ನಾಪೂರ ದಾರಿಯ ರೊಳ್ಳಿಯವರ ಹೂಲದ ಹತ್ತಿರ ಸಿ ಡಿ ನಿರ್ಮಾಣ CC deck slab/ C D | 1 | 59988 |
| 18 | 1514004027-25-686 ಸವಡಿ ಗ್ರಾಮದ 6ನೇ ವಾರ್ಡಿನ ಶರಣಪ್ಪ ಕಂಠಿ ಇವರ ಮನೆ ಹತ್ತರಿ ಸಿ ಡಿ ನಿರ್ಮಾಣ CC deck slab/ C D | 2 | 133556 |
| 19 | 1514004027-25-673 ಸವಡಿ ಗ್ರಾಮದ ತಾಯಮ್ಮನ ಗಿಡದಿಂದ ನೀಜಲಿಂಗಪ್ಪ ಕೂಡೆಕಲ್ ಮನೆಯವರೆಗೆ ಗಟಾರ ನಿರ್ಮಾಣ ಸಿ ಸಿ ಚರಂಡಿ | 2 | 124676 |
| 20 | 1514004027-25-676 ಸವಡಿ ಗ್ರಾಮದ ಉಂಡಿ ಇವರ ಹೂಲದ ಹತ್ತಿರ ಸಿ ಡಿ ನಿರ್ಮಾಣ CC deck slab/ C D /ಮೋರಿ ನಿರ್ಮಾಣ | 1 | 54224 |
| 21 | 1514004027-25-672 ಸವಡಿ ಗ್ರಾಮದ ಶ್ರೀ ಸಂಮೇಶ್ವರ ಪ್ರೌಢ ಶಾಲೆ ಗೇಟದಿಂದ ಸೂಸೈಟಿ ಮೂಲೆಯವರೆಗೆ ಸಿ ಡಿ ನಿರ್ಮಾಣ CC de | 2 | 133556 |
| 22 | 1514004027-25-679 ಸವಡಿ ಗ್ರಾಮದ ಕಂಬಕ್ತದಾರಿಯ ಭೀಮರಡ್ಡೆಪ್ಪ ಪರಡ್ಡಿ ಇವರ ಹೂಲದ ಹತ್ತಿರ ಸಿ ಡಿ ನ ಇರ್ಮಾಣ CC deck | 1 | 54224 |
| 23 | 1514004027-25-680 ಸವಡಿ ಗ್ರಾಮದ ಸಣದಾರಿ ಮಂಜಣ್ಣ ಗದಗ ಇವರ ಹೂಲದ ಹತ್ತಿರ ಸಿ ಡಿ ನಿರ್ಮಾಣ | 1 | 54224 |
| 24 | 1514004027-25-681 ಸವಡಿ ಗ್ರಾಮದ ಸಣದಾರಿ ಕಂಬಳಿ ಇವರ ಹೂಲದ ಹತ್ತಿರ ಸಿ ಡಿ ನಿರ್ಮಾಣ | 1 | 54224 |
| 25 | 1514004027-25-682 ಸವಡಿ ಗ್ರಾಮದ ಸಣ್ಣದಾರಿಯ ಶೀಲವಂತರ ಹೂಲದ ಹತ್ತಿರ ಸಿ ಡಿ ನಿರ್ಮಾಣ | 1 | 54224 |
| 26 | 1514004027-25-683 ಸವಡಿ ಗ್ರಾಮದ ಸಣದಾರಿ ಕಂಬಳಿ ಇವರ ಹೂಲದ ಹತ್ತಿರ ಸಿ ಡಿ ನಿರ್ಮಾಣ | 1 | 54224 |
| 27 | 1514004027-25-684 ಸವಡಿ ಗ್ರಾಮದ 6ನೇ ವಾರ್ಡಿನ ಬೆಟಗೇರಿ ಇವರ ಮನೆಯಿಂದ ಗದಗ ಮೇನ ರಸ್ತೆಯವರೆಗೆ ಗಟಾರ ನಿರ್ಮಾಣ ಸಿ ಸಿ | 2 | 124676 |
| 28 | 1514004027-25-669 ಹೊನ್ನಾಪೂರ ಗ್ರಾಮದ ಹುಸೇನಸಾಬ ರಾಜೂರ ಅವರ ಮನೆಯಿಂದ ಮೇನ ರಸ್ತೆಯವರೆಗೆ ಸಿ ಸಿ ರಸ್ತೆ | 1 | 61336 |
| 29 | 1514004027-25-670 ಹೊನ್ನಾಪೂರ ಗ್ರಾಮದ ನಿಂಗಪ್ಪ ಹಕ್ಕಿ ಅವರ ಮನೆಯಿಂದ ಕುರಗೊಡಗೌಡ ಪಾಟೀಲ ರಸ್ತೆಯವರೆಗೆ ಸಿ ಸಿ ರಸ್ತೆ | 2.4 | 167281 |
| 30 | 1514004027-25-685 ಸವಡಿ ಗ್ರಾಮದ 6ನೇ ವಾರ್ಡಿನ ರುದ್ರಪ್ಪ ಸುರಕೊಡ ಇವರ ಮನೆಯಿಂದ ಬಸವರಾಜ ಕುಂಬಾರ ಇವರ ಮನೆಯವರೆಗೆ ಗಟ | 1 | 61474 |
| 31 | 1514004027-25-687 ಹೊನ್ನಾಪೂ ಗ್ರಾಮದ ಈರಪ್ಪ ಮುತ್ತಲಗೇರಿ ಇವರ ಮನೆಯಿಂದ ಶಿವಪ್ಪ ಕನ್ನೂರ ಮನೆಯವೆರೆಗೆ ಗಟಾರ ನಿರ್ಮಾಣ | 1 | 61474 |

1) ದರಪಟ್ಟಿ ಅವಧಿ 20–08–2025 ರಿಂದ 29–08–2025 ರವರೆಗೆ
2) ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸುವ ಕೊನೆಯ ದಿನಾಂಕ 29–08–2025 ಮಧ್ಯಾಹ್ನ 12.30 ಘಂಟೆಯವರೆಗೆ.
3) ದರಪಟ್ಟಿ ತೆರೆಯುವ ದಿನಾಂಕ 29–08–2025 ಮಧ್ಯಾಹ್ನ 12.30 ಘಂಟೆ ನಂತರ.
4) ಅರ್ಜಿ ಸಲ್ಲಿಸುವ ಆಸಕ್ತ ನೋಂದಾಯಿತರು ಪ್ರತ್ಯೇಕವಾಗಿ ದರಪಟ್ಟಿಗಳನ್ನು ಸಲ್ಲಿಸತಕ್ಕದ್ದು.
5) ಜಿ,ಪಂ. ಡಿ.ಪಿ.ಸಿಲಾಗಿನನಲ್ಲಿ ನೋಂದಾಯಿಸಿದ ಸರಬರಾಜುದಾರರು ಮಾತ್ರ ದರಪಟ್ಟಿಯನ್ನು ಸಲ್ಲಿಸಬಹುದು.
6) ಷರತ್ತುಗಳು ಹಾಗೂ ಸಾಮಗ್ರಿ ವಿವರ ಮತ್ತು ಇತರೆ ವಿಷಯಗಳು ಮಾಹಿತಿಗಾಗಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಗ್ರಾಮ ಪಂಚಾಯತ ಕಾರ್ಯಾಲಯ ಇವರನ್ನು ಕಛೇರಿ ಸಮಯದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ

ಸಹಿ ಆಗಿದೆ/–
**ಪಂಚಾಯತ ಅಭಿವೃದ್ಧಿ ಅಧಿಕಾರಿ,**
**ಗ್ರಾಮ ಪಂಚಾಯತ, ಸವಡಿ**

ಸಹಿ ಆಗಿದೆ/–
**ಅಧ್ಯಕ್ಷರು,**
**ಗ್ರಾಮ ಪಂಚಾಯತ, ಸವಡಿ**

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka